
ನವಸಾಕ್ಷರ ಪುಸ್ತಕ ಮಾಲೆ ೨೩

ಬ್ಯಾಂಕುಗಳು

ಎಸ್. ಮಹಾಬಲೇಶ್ವರ



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ನವಸಾಕ್ಷರ ಪುಸ್ತಕ ಮಾಲೆ

ಅಧ್ಯಕ್ಷರು
ಡಾ. ಚಂದ್ರಶೇಖರ ಕಂಬಾರ
ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ

ಶ್ರೀ ಲೂಕೋಸ್ ವಲ್ಲತರೈ ಐ. ಎ. ಎಸ್.
ನಿರ್ದೇಶಕರು, ಲೋಕಶಿಕ್ಷಣ ನಿರ್ದೇಶನಾಲಯ

ಉನ್ನತ ಸಲಹಾ ಸಮಿತಿ ಸದಸ್ಯರು

ಶ್ರೀಯುತರಾದ
ಹಾ. ಮಾ. ನಾಯಕ
ಎಚ್. ನರಸಿಂಹಯ್ಯ
ಜಿ. ನಾರಾಯಣ
ಎಲ್. ಎಸ್. ಶೇಷಗಿರಿರಾವ್
ಶಾಂತರಸ
ಕೆ. ವಿ. ಸುಬ್ಬಣ್ಣ
ಗೊ. ರು. ಚನ್ನಬಸಪ್ಪ
ಪಿ. ಎಸ್. ಶಂಕರ್
ಶಿವಶಂಕರ ಹಿರೇಮಠ
ಆರ್. ಎಸ್. ರಾಜಾರಾಮ್
ಶ್ರೀಮತಿ ಎಲ್. ಜಿ. ಸುಮಿತ್ರ

ಸಂಪಾದಕ ಸಮಿತಿ

ಶ್ರೀಯುತರಾದ
ಎಸ್. ಜಿ. ನಾಗಲೋಟಿಮಠ
ಕೆ. ವಿ. ನಾರಾಯಣ
ಪುರುಷೋತ್ತಮ ಬಿಳಿಮಲೆ
ಕರೀಗೌಡ ಬೀಚನಹಳ್ಳಿ
ಅಮೃತ ಸೋಮೇಶ್ವರ
ಸಿ. ಆರ್. ಚಂದ್ರಶೇಖರ್
ಬಿ. ಎ. ಶ್ರೀಧರ
ಲಿಂಗದೇವರು ಹಳೆಮನೆ
ಭ. ಮಲ್ಲಿಕಾರ್ಜುನ
ಮಹಾಬಲೇಶ್ವರರಾವ್
ಭಕ್ತಪ್ರಿಯ
ಎಂ. ಪಿ. ಪರಮಶೇಖರಯ್ಯ
ಶ್ರೀಮತಿ ಉಷಾ ರಾಂಕುಮಾರ್

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ–೨೩

ಬ್ಯಾಂಕುಗಳು

ಎಸ್. ಮಹಾಬಲೇಶ್ವರ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ–೫೮೩ ೨೭೬

BANKUGALU : By S. Mahabaleswara. Published by The Director of Prasaranga
Kannada University, Hampi - 583 211, KARNATAKA.
First Impression 1994, Pp. ii + 26, Rs. 8.00

ಸಂಯೋಜನಾಧಿಕಾರಿ
ಎಚ್. ಎಸ್. ಶ್ರೀಮತಿ
ಪಠ್ಯಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ ೮.೦೦

ಮುದ್ರಕರು
ಪ್ರಿಂಟ್‌ಪ್ಯಾಕ್
ದೇವಯಾನಿ ಇಂಡಸ್ಟ್ರಿಯಲ್ ಕಾಂಪ್ಲೆಕ್ಸ್, ೨೮/೨, ಗೌಡನಪಾಳ್ಯ,
ಸುಬ್ರಹ್ಮಣ್ಯಪುರ ರಸ್ತೆ, ಬೆಂಗಳೂರು-೫೬೦ ೦೬೧.


ಬ್ಯಾಂಕುಗಳು

ರಂಗಪ್ಪ ಬೆಟ್ಟದಪುರದ ಒಬ್ಬ ರೈತ. ಅವನಿಗೆ ಹಳ್ಳಿಯ ಹೊರಗಡೆ ನಾಲ್ಕು ಎಕರೆ ಜಮೀನು ಇದೆ. ಅದರಲ್ಲಿ ಅವನು ಬತ್ತ, ರಾಗಿ, ಶೇಂಗಾ ಇವುಗಳನ್ನು ಬೆಳೆಯುತ್ತಾನೆ. ರಂಗಪ್ಪ ಓದು ಬರಹ ಚೆನ್ನಾಗಿ ಕಲಿತವನಲ್ಲ. ಅವನು ಚಿಕ್ಕವನಿದ್ದಾಗ ಎರಡು ವರ್ಷ ಶಾಲೆಗೆ ಹೋಗಿದ್ದ. ಅವನಿಗೆ ಅವನ ಹೆಸರು ಬರೆಯಲು ಬರುತ್ತದೆ. ಕನ್ನಡದ ಅಕ್ಷರಗಳನ್ನು ನಿಧಾನವಾಗಿ ಓದಬಲ್ಲ.

ರಂಗಪ್ಪನಿಗೆ ಇಬ್ಬರು ಗಂಡುಮಕ್ಕಳು. ಹಿರಿಯ ಮಗ ಸುಧಾಕರ, ಕಿರಿಯ ಮಗನ ಹೆಸರು ದಿವಾಕರ. ರಂಗಪ್ಪ ತನ್ನ ಇಬ್ಬರು ಮಕ್ಕಳನ್ನು ಶಾಲೆಗೆ ಕಳಿಸಿದ್ದಾನೆ. ಅವರಿಬ್ಬರೂ ಚೆನ್ನಾಗಿ ಓದಿ ಬುದ್ಧಿವಂತರಾಗಬೇಕು ಎಂದು ಅವನಿಗೆ ಆಸೆ. ಹಿರಿಯ ಮಗ ಸುಧಾಕರ ಮೈಸೂರಿನ ಕಾಲೇಜಿನಲ್ಲಿ ಓದು ಮುಗಿಸಿದ್ದಾನೆ. ಕಳೆದ ತಿಂಗಳು ಅವನಿಗೆ ಕೆಲಸ ಸಿಕ್ಕಿತು. ಮೈಸೂರಿನಲ್ಲೇ ಅವನು ಕೆಲಸಕ್ಕೆ ಸೇರಿಕೊಂಡ. ದಿವಾಕರ ಈಗ ಮೈಸೂರಿನ ಕಾಲೇಜಿನಲ್ಲಿ ಓದುತ್ತಿದ್ದಾನೆ.

ರಂಗಪ್ಪನಿಗೆ ಡಿ.ಡಿ ಬಂತು

ಮೊನ್ನೆ ಒಂದು ದಿನ ರಂಗಪ್ಪನಿಗೆ ಅಂಚೆಯಲ್ಲಿ ಒಂದು ಲಕೋಟೆ ಬಂತು. ರಂಗಪ್ಪನಿಗೆ ಕಾಗದಗಳು ಬರುವುದೇ ಅಪರೂಪ. ಬಂದಾಗಲೆಲ್ಲ ಅವನು ಬೆಟ್ಟದಪುರ ಶಾಲೆಯ ಮಾಸ್ತರರ ಹತ್ತಿರ ಹೋಗುತ್ತಾನೆ. ತನಗೆ ಬಂದ ಕಾಗದ ಅವರಿಗೆ ಕೊಡುತ್ತಾನೆ. ಅವರು ಇವನಿಗೆ



ರಂಗಪ್ಪನಿಗೆ ಡಿ.ಡಿ ಬಂತು

ಕಾಗದವನ್ನು ಓದಿ ಹೇಳುತ್ತಾರೆ. ಈ ಸಲವೂ ಅವನು ಲಕೋಟೆ ತೆಗೆದುಕೊಂಡು ಮಾಸ್ತರರ ಹತ್ತಿರ ಹೋದ. ಮಾಸ್ತರರು ಕಾಗದ ಓದಿದರು."ಇದು ನಿನ್ನ ಮಗ ಸುಧಾಕರ ಬರೆದಿರೋ ಕಾಗದ" ಎಂದು ಹೇಳಿದರು. 'ಏನು ಬರೆದಿದ್ದಾನೆ ಓದಿ ಹೇಳಿ ಸ್ವಾಮಿ' ಎಂದ ರಂಗಪ್ಪ. "ಅವನು ಕೆಲಸಕ್ಕೆ ಸೇರಿ ಒಂದು ತಿಂಗಳಾಗಿದೆ ಅಲ್ಲವೆ? ಮೊದಲನೇ ಸಂಬಳ ಬಂದ ಕೂಡಲೇ ನಿನಗೆ ಸ್ವಲ್ಪ ದುಡ್ಡು ಕಳಿಸಿದ್ದಾನೆ" ಎಂದು ಮಾಸ್ತರರು ಹೇಳಿದರು.

"ಎಲ್ಲಿ ಕಳಿಸಿದಾನೆ ಸ್ವಾಮೀ? ಲಕೋಟೆ ಒಳಗೆ ದುಡ್ಡೇ ಇಲ್ಲವಲ್ಲ" ಎಂದ. ರಂಗಪ್ಪ 'ಈ ಕಾಗದದ ಜೊತೆಗೇ ಒಂದು ಡಿ.ಡಿ ಕಳಿಸಿದ್ದಾನೆ ನೋಡು' ಎಂದು ಮಾಸ್ತರರು ತೋರಿಸಿದರು. ಕಾಗದದ ಜೊತೆಗೇ ಇನ್ನೊಂದು ಬೇರೆ ಬಣ್ಣದ ಕಾಗದ ಇತ್ತು. ಅದರ ಮೇಲೆ ಇಂಗ್ಲೀಷಿನಲ್ಲಿ ಏನೇನೋ ಬರೆದಿತ್ತು.

ರಂಗಪ್ಪ: 'ಡಿ.ಡಿ ಅಂದರೆ ಏನು ಸ್ವಾಮೀ?'

ಮಾಸ್ತರರು: "ಇದು ಒಂದು ಚೆಕ್ಕು ಕಣಪ್ಪ. ಇದನ್ನು ತೆಗೆದುಕೊಂಡು ಹೋಗಿ ಬ್ಯಾಂಕಿನಲ್ಲಿ ಕೊಟ್ಟರೆ ನಿನಗೆ ಹಣ ಕೊಡುತ್ತಾರೆ."

ರಂಗಪ್ಪ: ಯಾವ ಬ್ಯಾಂಕಿಗೆ ಕೊಡಬೇಕು ಸ್ವಾಮಿ?

ಮಾಸ್ತರರು: ನಮ್ಮ ಹಳ್ಳಿಯ ಬ್ಯಾಂಕಿನಲ್ಲೇ ಕೊಡುತ್ತಾರೆ. ನಾಳೆ ಬೆಳಿಗ್ಗೆ ಹತ್ತು ಗಂಟೆಗೆ ನೀನು ನಮ್ಮ ಮನೆಗೆ ಬಾ. ನಾವಿಬ್ಬರೂ ಬ್ಯಾಂಕಿಗೆ ಒಟ್ಟಿಗೇ ಹೋಗೋಣ. ಬರುವಾಗ ಈ ಡಿ.ಡಿಯನ್ನೂ ತೆಗೆದುಕೊಂಡು ಬಾ.

ರಂಗಪ್ಪ: ಆಯಿತು ಸ್ವಾಮೀ. ನಾಳೆ ಬೆಳಿಗ್ಗೆ ಬರುತ್ತೇನೆ. ನಮಸ್ಕಾರ.

ರಂಗಪ್ಪ ಮಾರನೆಯ ದಿನ ಬೆಳಿಗ್ಗೆ ಮಾಸ್ತರರ ಮನೆಗೆ ಬಂದ. ಬರುವಾಗ ಡಿ.ಡಿಯನ್ನು ತಂದಿದ್ದ. ಇಬ್ಬರೂ ಕೂಡಿ, ಹಳ್ಳಿಯ ಮುಖ್ಯರಸ್ತೆಯಲ್ಲಿ ಇದ್ದ ಬ್ಯಾಂಕಿಗೆ ಹೋದರು.

ರಂಗಪ್ಪ ಬ್ಯಾಂಕಿಗೆ ಹೋದ

ಬ್ಯಾಂಕಿನ ಅಧಿಕಾರಿ ಮಾಸ್ತರರನ್ನು ನೋಡಿ 'ನಮಸ್ಕಾರ ಮಾಸ್ತರರೇ, ಬನ್ನಿ, ಕುಳಿತುಕೊಳ್ಳಿ' ಎಂದು ಹೇಳಿದರು. ಜೊತೆಯಲ್ಲಿದ್ದ ರಂಗಪ್ಪನಿಗೂ ಕೂರಲು ಹೇಳಿದರು.


"ಸ್ವಾಮಿ, ಈತನ ಹೆಸರು ರಂಗಪ್ಪ. ಇವನು ಇದೇ ಹಳ್ಳಿಯ ಒಬ್ಬ ರೈತ. ಇವನ ಮಗ ಸುಧಾಕರ ಈಗ ಮೈಸೂರಿನಲ್ಲಿ ಇದ್ದಾನೆ. ಇವನ ಹೆಸರಿಗೆ ಒಂದು ಡಿ.ಡಿ ಕಳಿಸಿದ್ದಾನೆ. ನೀವು ಇವನಿಗೆ ಹಣ ಪಡೆಯಲು ಸಹಾಯ ಮಾಡಿ" ಎಂದು ಮಾಸ್ತರರು ಬ್ಯಾಂಕಿನ ಅಧಿಕಾರಿಗೆ ಹೇಳಿದರು.

ರಂಗಪ್ಪ ಬ್ಯಾಂಕಿನ ಅಧಿಕಾರಿಗೆ ಡಿ.ಡಿಯನ್ನು ಕೊಟ್ಟ. ಬ್ಯಾಂಕಿನ ಅಧಿಕಾರಿ ಅದನ್ನು ಒಮ್ಮೆ ಓದಿ ನೋಡಿದರು.

ಅಧಿಕಾರಿ: ನೀವು ನಮ್ಮ ಬ್ಯಾಂಕಿನಲ್ಲಿ ಖಾತೆ ತೆರೆದಿದ್ದೀರಾ?

ರಂಗಪ್ಪ: ಇಲ್ಲ ಸ್ವಾಮಿ, ನಾನು ಇದೇ ಮೊದಲ ಸಲ ಬ್ಯಾಂಕಿಗೆ ಬರುತ್ತಿದ್ದೇನೆ.

ಅಧಿಕಾರಿ: ಹಾಗಾದರೆ ನೀವು ಈಗ ಒಂದು ಉಳಿತಾಯ ಖಾತೆ ತೆರೆಯಿರಿ. ಅದಕ್ಕೆ ಮೊದಲು ಸ್ವಲ್ಪ ಹಣ ನಗದಾಗಿ ಕಟ್ಟಿ. ನಂತರ ಈ ಡಿ.ಡಿಯನ್ನು ನಿಮ್ಮ ಖಾತೆಗೆ ಜಮಾ ಮಾಡುತ್ತೇವೆ.



ರಂಗಪ್ಪ ಬ್ಯಾಂಕಿಗೆ ಹೋದ

ರಂಗಪ್ಪ: ಉಳಿತಾಯ ಖಾತೆ ಅಂದರೆ ಏನು ಸ್ವಾಮಿ?

ಅಧಿಕಾರಿ: ಉಳಿತಾಯ ಅಂದರೆ ನಮ್ಮ ಗಳಿಕೆಯಲ್ಲಿ ಸ್ವಲ್ಪ ಸ್ವಲ್ಪ ಹಣವನ್ನು ಉಳಿಸುವುದು. ನಮ್ಮ ಬಳಿ ಇರುವ ಹಣವನ್ನೆಲ್ಲ ಖರ್ಚು ಮಾಡಬಾರದು ನಾಳೆಗಾಗಿ ಸ್ವಲ್ಪ ಉಳಿಸಬೇಕು. ಹಾಗೆ ಉಳಿಸಿದ ಹಣವನ್ನು ಮನೆಯಲ್ಲಿ ಇಡಬಾರದು. ಅದು ಕಳೆದು ಹೋಗುವ, ಹಾಳಾಗುವ ಸಂಭವ ಇರುತ್ತದೆ. ಈ ಹಣವನ್ನು ಬ್ಯಾಂಕಿನಲ್ಲಿ ಇಟ್ಟರೆ ಅದು ಸುರಕ್ಷಿತವಾಗಿರುತ್ತದೆ. ಅಲ್ಲದೆ ಈ ಹಣಕ್ಕೆ ಬಡ್ಡಿಯೂ ಸಿಗುತ್ತದೆ. ನಿಮಗೆ ಯಾವಾಗಲಾದರೂ ಹಣ ಬೇಕಾದರೆ ನಿಮ್ಮ

ಖಾತೆಯಿಂದ ಅದನ್ನು ಪಡೆದುಕೊಳ್ಳಬಹುದು. ಬೇರೆಯವರಿಗೆ ಹಣ ಕೊಡಬೇಕಾದಾಗ ಚೆಕ್ ಮೂಲಕ ಕೊಡಬಹುದು. ಹೀಗೆ ನಿಮಗೆ ಹಲವಾರು ಅನುಕೂಲತೆಗಳು ದೊರೆಯುತ್ತವೆ. ನೀವು ಈಗ ಒಂದು ಉಳಿತಾಯ ಖಾತೆಯನ್ನು ತೆರೆಯಿರಿ.



ಬ್ಯಾಂಕಿನ ಅಧಿಕಾರಿಗಳೊಂದಿಗೆ ರಂಗಪ್ಪ ಚರ್ಚಿಸುತ್ತಿರುವುದು

ರಂಗಪ್ಪ ಖಾತೆ ತೆರೆದ

ಅಧಿಕಾರಿಗಳು ಒಂದು ಖಾತೆ ತೆರೆಯುವ ಅರ್ಜಿ ನಮೂನೆಯನ್ನು ಮಾಸ್ತರರ ಕೈಯಲ್ಲಿ ಕೊಟ್ಟರು. ಮಾಸ್ತರರು ಅದರಲ್ಲಿ ರಂಗಪ್ಪನ ಹೆಸರು, ಉದ್ಯೋಗ, ವಿಳಾಸ ಇವುಗಳನ್ನು ಭರ್ತಿ ಮಾಡಿದರು. ನಂತರ ಸಹಿ ಮಾಡಬೇಕಾದ ಸ್ಥಳಗಳನ್ನು ಗುರುತು ಮಾಡಿದರು. ರಂಗಪ್ಪನಿಗೆ ತನ್ನ ಹೆಸರನ್ನು ಬರೆಯಲು ಬರುತ್ತಿತ್ತು. ಮಾಸ್ತರರು ಗುರುತು ಮಾಡಿದ ಸ್ಥಳಗಳಲ್ಲಿ ರಂಗಪ್ಪ ತನ್ನ ಹೆಸರನ್ನು ಬರೆದ.


ಅಧಿಕಾರಿ: ರಂಗಪ್ಪ, ನಿಮ್ಮ ಖಾತೆಗೆ ನೀವು ಮೊದಲು ಸ್ವಲ್ಪ ನಗದು ಹಣ ಕಟ್ಟಿ.

ರಂಗಪ್ಪ: ಎಷ್ಟು ಹಣ ಸ್ವಾಮಿ?

ಅಧಿಕಾರಿ: ನೀವು ಐದು ರೂಪಾಯಿಯಿಂದಲೂ ಖಾತೆ ತೆರೆಯಬಹುದು. ಬೇಕಾದರೆ ಹೆಚ್ಚು ಹಣವನ್ನು ಕಟ್ಟಬಹುದು. ಮಾಸ್ತರರೇ, ಇವರಿಗೆ ಒಂದು ಚಲನ್ನು ಬರೆದು ಕೊಡಿ.

ರಂಗಪ್ಪ: ಚಲನ್ನು ಎಂದರೆ ಏನು ಸ್ವಾಮೀ?

ಅಧಿಕಾರಿ: ಚಲನ್ನು ಎಂದರೆ ಖಾತೆಗೆ ಹಣವನ್ನು ಜಮಾ ಮಾಡಲು ಬಳಸುವ ನಮೂನೆ. ನಿಮ್ಮ ಖಾತೆಗೆ ಇನ್ನು ಮುಂದೆ ಹಣ ಕಟ್ಟುವಾಗ, ಈ ನಮೂನೆಯನ್ನು ಉಪಯೋಗಿಸಿ. ಇದರಲ್ಲಿ ನಿಮ್ಮ ಖಾತೆಯ ಸಂಖ್ಯೆ, ನಿಮ್ಮ ಹೆಸರು, ಎಷ್ಟು ಹಣ ಕಟ್ಟುತ್ತಿದ್ದೀರಿ ಇವುಗಳನ್ನೆಲ್ಲ ಬರೆದು



ರಂಗಪ್ಪ ಖಾತೆ ತೆರೆದ

ಕೊಡಬೇಕು. ನಿಮ್ಮಿಂದ ಹಣ ಪಡೆದದ್ದಕ್ಕೆ ದಾಖಲೆಯಾಗಿ ಬ್ಯಾಂಕು ನಿಮಗೆ ಈ ಚಲನ್ನಿನ ಒಂದು ಭಾಗವನ್ನು ವಾಪಸು ಕೊಡುತ್ತದೆ. ಇದರಲ್ಲಿ ಬ್ಯಾಂಕಿನ ಮೊಹರು, ದಿನಾಂಕ ಮತ್ತು ಹಣ ಪಡೆದವರ ಸಹಿ ಇರುತ್ತದೆ.

ಮಾಸ್ತರರು ಎದ್ದು ಹೋಗಿ ಕೌಂಟರಿನ ಬಳಿ ನೇತುಹಾಕಿದ್ದ ಚಲನ್ನು ಒಂದನ್ನು ತಂದರು. ರಂಗಪ್ಪನನ್ನು ಕೇಳಿದರು, 'ರಂಗಪ್ಪ ಈಗ ನಿನ್ನ ಬಳಿ ಎಷ್ಟು ಹಣವಿದೆ? ಉಳಿತಾಯ ಖಾತೆಯನ್ನು ಆರಂಭಿಸಲು ಎಷ್ಟು ಹಣ ಕಟ್ಟುತ್ತೀಯ?

ರಂಗಪ್ಪ: ಸ್ವಾಮಿ, ಈಗ ನನ್ನ ಬಳಿ ಒಂದು ನೂರು ರೂಪಾಯಿ ಇದೆ. ಇಷ್ಟನ್ನೂ ಕಟ್ಟುತ್ತೇನೆ.

ಮಾಸ್ತರರು ಚಲನ್ನು ಬರೆದರು. ಆಗ ಬ್ಯಾಂಕಿನ ಅಧಿಕಾರಿ ಮಾಸ್ತರರಿಗೆ ಹೇಳಿದರು.

"ಸ್ವಾಮೀ, ನೀವು ಇವರನ್ನು ಬ್ಯಾಂಕಿಗೆ ಪರಿಚಯಿಸಲು ಇಲ್ಲಿ ಒಂದು ಸಹಿ ಹಾಕಿ. ಮತ್ತು ನಿಮ್ಮ ಖಾತೆಯ ಸಂಖ್ಯೆಯನ್ನು ಬರೆಯಿರಿ." ಮಾಸ್ತರರು ಸಹಿ ಮಾಡಿ, ತಮ್ಮ ಖಾತೆಯ ಸಂಖ್ಯೆಯನ್ನು ಬರೆದರು. ನಂತರ ರಂಗಪ್ಪನು ತನ್ನ ಒಂದು ನೂರು ರೂಪಾಯಿಯನ್ನು, ಖಾತೆ ತೆರೆಯುವ ಅರ್ಜಿಯನ್ನು, ಚಲನ್ನನ್ನು ನಗದು ಕೌಂಟರಿನಲ್ಲಿ ಕೊಟ್ಟ. ಅಲ್ಲಿದ್ದ ಗುಮಾಸ್ತರು ಅದನ್ನು ಪಡೆದು, ಬ್ಯಾಂಕಿನ ಮೊಹರು ಹಾಕಿ, ಸಹಿ ಮಾಡಿ ಅಧಿಕಾರಿಗಳಿಗೆ ಕೊಟ್ಟರು. ಅಧಿಕಾರಿಗಳು ಚಲನ್ನಿನಲ್ಲಿ ಸಹಿ ಮಾಡಿ ಒಂದು ಭಾಗವನ್ನು ರಂಗಪ್ಪನಿಗೆ ಕೊಟ್ಟರು. ಅರ್ಜಿಯನ್ನು ಉಳಿತಾಯ ಖಾತೆ ನೋಡಿಕೊಳ್ಳುವ ಗುಮಾಸ್ತರಿಗೆ ಕೊಟ್ಟರು.

ಪಾಸ್ ಪುಸ್ತಕ

ಅಧಿಕಾರಿ: ರಂಗಪ್ಪ, ಇನ್ನು ಐದು ನಿಮಿಷಗಳಲ್ಲಿ ನಿಮಗೆ ಪಾಸ್‌ಪುಸ್ತಕ ಸಿಗುತ್ತದೆ. ದಯವಿಟ್ಟು ಅಲ್ಲಿಯವರೆಗೂ ಕಾಯಿರಿ. ನಿಮಗೆ ಬಂದಿರುವ ಡಿ.ಡಿಯನ್ನು ನಿಮ್ಮ ಖಾತೆಗೆ ಈಗ ಹಾಕಬಹುದು. ಮಾಸ್ತರರು ನಿಮಗೆ ಚಲನ್ನು ಬರೆದು ಕೊಡುತ್ತಾರೆ.

ರಂಗಪ್ಪ: ಪಾಸ್‌ಪುಸ್ತಕ ಎಂದರೆ ಏನು ಸ್ವಾಮಿ?

ಅಧಿಕಾರಿ: ಪಾಸ್‌ಪುಸ್ತಕ ಎಂದರೆ ಬ್ಯಾಂಕು ಖಾತೆದಾರರಿಗೆ ಕೊಡುವ ಒಂದು ಚಿಕ್ಕ ಪುಸ್ತಕ. ಇದು ಗ್ರಾಹಕರ ಉಳಿತಾಯ ಖಾತೆಯ ಒಂದು ದಾಖಲೆ. ಇದನ್ನು ಬ್ಯಾಂಕು ನಿಮಗೆ ಉಚಿತವಾಗಿ ಕೊಡುತ್ತದೆ. ಇದರಲ್ಲಿ ನಿಮ್ಮ ಖಾತೆಯ ಸಂಖ್ಯೆ, ಹೆಸರು, ವಿಳಾಸ ಬರೆದಿರುತ್ತದೆ. ಅಲ್ಲದೆ,

ನಿಮ್ಮ ಖಾತೆಗೆ ಎಷ್ಟು ಹಣ ಜಮಾ ಆಗಿದೆ, ಎಷ್ಟು ಹಣ ವಾಪಸು ಪಡೆದಿದ್ದೀರಿ, ಬಾಕಿ ಉಳಿದಿರುವ ಶಿಲ್ಕು ಎಷ್ಟು - ಈ ವಿವರಗಳು ಇರುತ್ತವೆ. ನೀವು ಪ್ರತಿಸಲ ಬ್ಯಾಂಕಿಗೆ ಬರುವಾಗಲೂ ಇದನ್ನು ತನ್ನಿರಿ.

ಇವರಿಬ್ಬರು ಮಾತನಾಡುತ್ತಿರುವಾಗ ಮಾಸ್ತರರು ಡಿ.ಡಿಯನ್ನು ರಂಗಪ್ಪನ ಖಾತೆಗೆ ಜಮಾ ಮಾಡಲು ಚಲನ್ನು ಬರೆದರು ಮತ್ತು ಅದನ್ನು ಬ್ಯಾಂಕಿನ ಅಧಿಕಾರಿಗೆ ಕೊಟ್ಟರು. ಬ್ಯಾಂಕಿನ ಅಧಿಕಾರಿಯು ಡಿ.ಡಿ ಮತ್ತು ಚಲನ್ನು ಎರಡನ್ನೂ ಪರಿಶೀಲಿಸಿದರು. ಚಲನ್ನಿನ ಒಂದು ಭಾಗಕ್ಕೆ ಬ್ಯಾಂಕಿನ ಮೊಹರು ಒತ್ತಿ, ಸಹಿ ಮಾಡಿ, ರಂಗಪ್ಪನಿಗೆ ಕೊಟ್ಟರು.

ಅಷ್ಟರಲ್ಲಿ ಉಳಿತಾಯ ಖಾತೆಯ ಗುಮಾಸ್ತರು ರಂಗಪ್ಪನ ಪಾಸ್‌ಪುಸ್ತಕವನ್ನು ಸಿದ್ದಪಡಿಸಿದ್ದರು. ಅದರಲ್ಲಿ ಅಧಿಕಾರಿ ಸಹಿಮಾಡಿ ರಂಗಪ್ಪನಿಗೆ ಅದನ್ನು ಕೊಟ್ಟರು. ರಂಗಪ್ಪ ಇದುವರೆಗೂ ಬ್ಯಾಂಕಿಗೆ ಬಂದವನಲ್ಲ. ಇವತ್ತೇ ಮೊದಲ ಬಾರಿಗೆ ಬಂದಿದ್ದ. ಅವನಿಗೆ ಬ್ಯಾಂಕಿನ ಈ ಕೆಲಸಗಳೆಲ್ಲ ಹೊಸತು. ಹಾಗಾಗಿ ಅವನಲ್ಲಿ ಬ್ಯಾಂಕು ಹೇಗೆ ಕೆಲಸ ಮಾಡುತ್ತದೆ ಎಂದು ಕುತೂಹಲ ಮೂಡಿತು. ರಂಗಪ್ಪ ಬ್ಯಾಂಕಿನ ಅಧಿಕಾರಿಗಳನ್ನು ಈ ವಿಷಯವಾಗಿ ವಿಚಾರಿಸಿದ.

ಹನಿಗೂಡಿದರೆ ಹಳ್ಳ

ರಂಗಪ್ಪ: ಸ್ವಾಮೀ, ನಿಮ್ಮ ಬ್ಯಾಂಕು ಬೇರೆ ಏನೇನು ಕೆಲಸ ಮಾಡುತ್ತದೆ?

ಅಧಿಕಾರಿ: ರಂಗಪ್ಪ, ಬ್ಯಾಂಕುಗಳ ಮುಖ್ಯ ಕೆಲಸ ಜನರಿಂದ ಹಣವನ್ನು ಠೇವಣಿ ರೂಪದಲ್ಲಿ ಸಂಗ್ರಹಿಸುವುದು. ಮತ್ತು ಅದನ್ನು ಯಾರಿಗೆ ಹಣದ ಅಗತ್ಯ ಇದೆಯೋ, ಅಂತಹ ಉದ್ದಿಮೆದಾರರಿಗೆ ಸಾಲರೂಪದಲ್ಲಿ ಕೊಡುವುದು. ಹೀಗೆ ಸಾಲ ಕೊಟ್ಟ ಹಣದಿಂದ ಬ್ಯಾಂಕಿಗೆ ಬಡ್ಡಿ ರೂಪದಲ್ಲಿ ಆದಾಯ ಬರುತ್ತದೆ. ಬ್ಯಾಂಕು ತಾನು ಜನರಿಂದ ಸಂಗ್ರಹಿಸಿದ ಠೇವಣಿಗಳಿಗೂ ಬಡ್ಡಿ ನೀಡುತ್ತದೆ. ಇದರಿಂದ ಠೇವಣಿ ಇಡಬಲ್ಲ ಜನರ ಹಣ ಉತ್ಪಾದನೆಯ ಕೆಲಸಗಳಿಗೆ ದೊರಕುತ್ತದೆ. ದೇಶದ ಪ್ರಗತಿಗೆ ಬ್ಯಾಂಕುಗಳೇ ಮುಖ್ಯ ಬುನಾದಿ.

ನಾವು ಜನರಿಂದ ಹಣ ಸಂಗ್ರಹಿಸಲು ಹಲವಾರು ಆಕರ್ಷಕ ಯೋಜನೆಗಳನ್ನು ಆರಂಭಿಸಿದ್ದೇವೆ. ಎಲ್ಲರಿಗೂ ಆದಾಯ ಒಂದೇ ರೀತಿಯಲ್ಲಿ ಬರುವುದಿಲ್ಲ ಮತ್ತು ಅವರು ಎಷ್ಟು ಹಣವನ್ನು ಉಳಿಸಬಹುದು ಎಂಬುದೂ ಒಂದೇ ರೀತಿ ಇರುವುದಿಲ್ಲ. ಉದಾಹರಣೆಗೆ, ನಿನ್ನಂತಹ ರೈತರಿಗೆ ಬೆಳೆದ ಫಸಲನ್ನು ಮಾರುಕಟ್ಟೆಯಲ್ಲಿ ಮಾರಿದಾಗ ಮಾತ್ರ ಕೈಗೆ ಹಣ ಬರುತ್ತದೆ. ಇನ್ನು

ನಿನ್ನ ಮಗ ನೌಕರಿಯಲ್ಲಿ ಇರುವುದರಿಂದ ಆತನಿಗೆ ಪ್ರತಿ ತಿಂಗಳೂ ಸಂಬಳ ಬರುತ್ತದೆ. ಇದರಿಂದ ಆತ ಪ್ರತಿ ತಿಂಗಳೂ ಒಂದಷ್ಟು ಹಣ ಉಳಿಸಬಹುದು. ಅಂತಹವರಿಗಾಗಿ "ಆವರ್ತಕ ಠೇವಣಿ ಯೋಜನೆ" ಇದೆ. ಇದರಲ್ಲಿ ಪ್ರತಿ ತಿಂಗಳೂ ಒಂದಷ್ಟು ಹಣವನ್ನು ಕಟ್ಟಿ, ಅವಧಿ ಮುಗಿದ ನಂತರ ಬಡ್ಡಿ ಸಹಿತ ವಾಪಸು ಪಡೆಯಬಹುದು. ಮುಂದೆ ಯಾವಾಗಲಾದರೂ ಒಮ್ಮೆಲೇ ತುಂಬಾ ಹಣದ ಅಗತ್ಯ ಇದ್ದವರು ಇಂತಹ ಯೋಜನೆಗಳಲ್ಲಿ ಹಣ ತೊಡಗಿಸಬಹುದು. 'ಹನಿಗೂಡಿದರೆ ಹಳ್ಳ' ಎಂಬ ಮಾತು ಈ ಠೇವಣಿಗೆ ತುಂಬ ಚೆನ್ನಾಗಿ ಹೊಂದುತ್ತದೆ.

ಕೆಲವರಿಗೆ ಒಮ್ಮೆಲೇ ತುಂಬಾ ಹಣ ಕೈಗೆ ಬರುತ್ತದೆ. ಇಂಥವರು ಆ ಹಣವನ್ನು ಒಂದು ಗೊತ್ತಾದ ಅವಧಿಗೆ ಠೇವಣಿ ಇಟ್ಟು ಪ್ರತಿ ತಿಂಗಳೂ ಬಡ್ಡಿ ಪಡೆಯಬಹುದು ಅಥವಾ ಒಂದು ಗೊತ್ತಾದ ಅವಧಿಯ ನಂತರ ಠೇವಣಿಯನ್ನು ವಾಪಸು ಪಡೆಯಬಹುದು.

ಅಂಗಡಿ ಮುಂತಾದ ಪ್ರತಿದಿನ ಆದಾಯ ಬರುವ ಕಸುಬುಗಳಲ್ಲಿ ಇರುವವರು ನಮ್ಮಲ್ಲಿರುವ ಪ್ರತಿದಿನ ಹಣ ಕಟ್ಟುವ ಯೋಜನೆಗೆ ಸೇರಿಕೊಳ್ಳಬಹುದು. ಇವರ ಅನುಕೂಲಕ್ಕಾಗಿ ಬ್ಯಾಂಕು ತನ್ನ ಹಣ ಸಂಗ್ರಾಹಕರನ್ನು ಇವರ ಅಂಗಡಿ, ಮನೆ ಬಾಗಿಲಿಗೇ ಕಳಿಸುತ್ತದೆ. ಹಣ ಕಟ್ಟುವ ಸಲುವಾಗಿ ಇವರು ಬ್ಯಾಂಕಿಗೆ ಬರುವ ಅಗತ್ಯವೂ ಇಲ್ಲ.

ಉಳಿತಾಯ ಖಾತೆ ಎಲ್ಲ ವರ್ಗದ ಜನರಿಗೂ ಅನುಕೂಲಕರವಾದ ಯೋಜನೆ. ಇದರಲ್ಲಿ ನೀವು ಯಾವಾಗ ಬೇಕಾದರೂ, ಎಷ್ಟು ಬೇಕಾದರೂ ಹಣ ಜಮಾ ಮಾಡಬಹುದು. ಯಾವಾಗ ಬೇಕಾದರೂ ಖಾತೆಯಲ್ಲಿರುವ ಹಣವನ್ನು ವಾಪಸು ಪಡೆಯಬಹುದು.

ಚೆಕ್ ಪುಸ್ತಕ

ಅಷ್ಟರಲ್ಲಿ ಉಳಿತಾಯ ಖಾತೆಯ ಗುಮಾಸ್ತ ಅಧಿಕಾರಿಗಳನ್ನು ಕೇಳಿದ

'ಸರ್, ಇವರಿಗೆ ಚೆಕ್ ಪುಸ್ತಕ ಕೊಡಬೇಕೆ?"

ರಂಗಪ್ಪ: ಸ್ವಾಮೀ, ಚೆಕ್ ಪುಸ್ತಕ ಎಂದರೇನು?

ಅಧಿಕಾರಿ: ರಂಗಪ್ಪ, ಚೆಕ್ಕು ಎಂದರೆ ನಿನ್ನ ಉಳಿತಾಯ ಖಾತೆಯಿಂದ ಹಣ ವಾಪಸು ಪಡೆಯಲು ಬಳಸುವ ನಮೂನೆ. ಇಂತಹ ಚೆಕ್ಕುಗಳಿರುವ ಒಂದು ಪುಸ್ತಕವನ್ನು ಬ್ಯಾಂಕು ಖಾತೆದಾರರಿಗೆ ಉಚಿತವಾಗಿ ಕೊಡುತ್ತದೆ. ಇದರಲ್ಲಿರುವ ಚೆಕ್ಕಿನಲ್ಲಿ ಖಾತೆದಾರನು ದಿನಾಂಕ, ಯಾರಿಗೆ ಹಣ



ರಂಗಪ್ಪ ಬ್ಯಾಂಕಿನಿಂದ ಹಣಪಡೆದ

ಕೊಡಬೇಕೋ ಅವರ ಹೆಸರು, ಎಷ್ಟು ಹಣ ಎಂಬುದನ್ನೆಲ್ಲ ಬರೆದು ಸಹಿ ಮಾಡಬೇಕು. ಹಣವನ್ನು ಅಂಕಿ ಮತ್ತು ಅಕ್ಷರ ಎರಡರಲ್ಲೂ ಬರೆಯಬೇಕು ಮತ್ತು ಇದನ್ನು ಬ್ಯಾಂಕಿಗೆ ಕಳಿಸಬೇಕು. ಯಾರಿಗೆ ಹಣ ಕೊಡಬೇಕೆಂದು ಬರೆದಿದೆಯೋ ಅವರಿಗೆ ಬ್ಯಾಂಕು ಹಣ ಕೊಡುತ್ತದೆ.

ರಂಗಪ್ಪ: ಸರಿ ಸ್ವಾಮಿ, ಆದರೆ ನನಗೆ ಈಗ ಚೆಕ್ ಪುಸ್ತಕ ಬೇಡ. ಹೇಗಿದ್ದರೂ ನನಗೆ ಚೆನ್ನಾಗಿ ಓದಲು ಬರೆಯಲು ಬರುವುದಿಲ್ಲ. ಹಣ ಬೇಕಾದಾಗ ನಾನೇ ಬ್ಯಾಂಕಿಗೆ ಬರುತ್ತೇನೆ.

ಇಷ್ಟು ಹೇಳಿದ ನಂತರ, ರಂಗಪ್ಪನೂ, ಮಾಸ್ತರರೂ ಬ್ಯಾಂಕಿನ ಅಧಿಕಾರಿಗೆ ವಂದನೆ ಹೇಳಿ ಹೊರಬಂದರು. ಮನೆಗೆ ವಾಪಸಾಗುವ ದಾರಿಯಲ್ಲಿ ರಂಗಪ್ಪ ಮಾಸ್ತರರನ್ನು ಕೇಳಿದ.

ರಂಗಪ್ಪ: ಸ್ವಾಮಿ, ನನಗೆ ಬ್ಯಾಂಕುಗಳು ಏನೇನು ಕೆಲಸ ಮಾಡುತ್ತವೆ ಎಂದು ತಿಳಿದು ಸಂತೋಷವಾಯಿತು. ಇದರ ಬಗ್ಗೆ ಇನ್ನೂ ಹೆಚ್ಚು ತಿಳಿದುಕೊಳ್ಳಬೇಕೆಂಬ ಕುತೂಹಲ ಇದೆ.

ಮಾಸ್ತರರು: ರಂಗಪ್ಪ, ಭಾನುವಾರ ಬ್ಯಾಂಕಿಗೆ ರಜ. ಆ ದಿನ ಬ್ಯಾಂಕಿನ ಅಧಿಕಾರಿಗಳು ನಮ್ಮ ಮನೆಗೆ ಬರುತ್ತಾರೆ. ಆಗ ನೀನೂ ಬಾ, ಅವರೊಂದಿಗೆ ಮಾತಾಡಿ ನೀನು ನಿನಗೆ ಬೇಕಾದ ವಿಷಯಗಳನ್ನು ತಿಳಿದುಕೊಳ್ಳಬಹುದು.

ರಂಗಪ್ಪ: ಆಗಲಿ ಸ್ವಾಮಿ, ಭಾನುವಾರ ನನ್ನ ಮಕ್ಕಳಿಬ್ಬರೂ ಮೈಸೂರಿನಿಂದ ಬರುತ್ತಾರೆ. ಅವರನ್ನು ನಿಮ್ಮ ಮನೆಗೆ ಕರೆದುಕೊಂಡು ಬರುತ್ತೇನೆ. ಅವರಿಗೂ ಬ್ಯಾಂಕುಗಳ ಬಗ್ಗೆ ಹೆಚ್ಚು ವಿಷಯಗಳು ಗೊತ್ತಾಗಲಿ.

ಮಾಸ್ತರರು: ಒಳ್ಳೆಯದು ರಂಗಪ್ಪ, ಹಾಗೇ ಮಾಡು !

ರಂಗಪ್ಪ ಕುತೂಹಲದಿಂದ ಕಾಯುತ್ತಿದ್ದ ಭಾನುವಾರ ಬಂತು. ಶನಿವಾರ ರಾತ್ರಿಯೇ ಸುಧಾಕರ ಮತ್ತು ದಿವಾಕರ ಮೈಸೂರಿನಿಂದ ಬಂದಿದ್ದರು. ರಂಗಪ್ಪ ಅವರನ್ನು ತನ್ನ ಜೊತೆ ಕರೆದುಕೊಂಡು ಮಾಸ್ತರರ ಮನೆಗೆ ಬಂದ.

ಮಾಸ್ತರರ ಮನೆಗೆ ಬ್ಯಾಂಕಿನ ಅಧಿಕಾರಿಯೂ ಬಂದಿದ್ದರು. ಮಾಸ್ತರರು ರಂಗಪ್ಪನ ಇಬ್ಬರು ಮಕ್ಕಳನ್ನು ಅಧಿಕಾರಿಗಳಿಗೆ ಪರಿಚಯ ಮಾಡಿಕೊಟ್ಟರು. ನಂತರ ಮಾಸ್ತರರು ಅಧಿಕಾರಿಗಳಿಗೆ ಹೇಳಿದರು.

ಮಾಸ್ತರರು: ಸ್ವಾಮಿ, ರಂಗಪ್ಪನಿಗೆ ಆವತ್ತು ನಿಮ್ಮ ಬ್ಯಾಂಕಿಗೆ ಬಂದಾಗಿನಿಂದಲೂ ಬ್ಯಾಂಕುಗಳ ಬಗ್ಗೆ ತಿಳಿದುಕೊಳ್ಳಬೇಕು ಎಂಬ ಕುತೂಹಲ. ಅದಕ್ಕೇ ಅವನು ಇವತ್ತು ನಮ್ಮಲ್ಲಿಗೆ ಬಂದಿದ್ದಾನೆ.

ಅಧಿಕಾರಿ: ತುಂಬ ಸಂತೋಷ, ಮಾಸ್ತರರೇ, ಬ್ಯಾಂಕುಗಳು ಹೇಗೆ ಕೆಲಸ ಮಾಡುತ್ತದೆ ಎಂದು ಎಲ್ಲರೂ ತಿಳಿದುಕೊಂಡಿರಬೇಕು. ಅದರಿಂದ ಬ್ಯಾಂಕುಗಳಿಗೂ, ಅದರ ಗ್ರಾಹಕರಿಗೂ ಇಬ್ಬರಿಗೂ ಲಾಭ.

ಅಣೆಕಟ್ಟುಗಳ ಹಾಗೆ

ರಂಗಪ್ಪ, ನೀನು ಕನ್ನಂಬಾಡಿ ಕಟ್ಟೆಯನ್ನು ನೋಡಿದ್ದೀಯಾ?

ರಂಗಪ್ಪ: ನೋಡಿದ್ದೀನಿ ಸ್ವಾಮಿ, ಮೈಸೂರಿನ ಹತ್ತಿರ ಅದನ್ನು ಕಾವೇರಿ ನದಿಗೆ ಅಡ್ಡವಾಗಿ ಕಟ್ಟಿದ್ದಾರೆ.

ಅಧಿಕಾರಿ: ಅದನ್ನು ಯಾಕೆ ಕಟ್ಟಿದ್ದಾರೆ ಗೊತ್ತೆ?

ರಂಗಪ್ಪ: ಸ್ವಾಮಿ, ಅದನ್ನು ಕಟ್ಟಿರುವುದರಿಂದಲೇ ಇವತ್ತು ಮಂಡ್ಯ ಜಿಲ್ಲೆ ತುಂಬ ಬೇಸಾಯ ನಡೀತಾ ಇದೆ. ಇಡೀ ಜಿಲ್ಲೆ ಮುಂದೆ ಬಂದಿರೋದೆ ಈ ಕಟ್ಟೆಯಿಂದ.

ಅಧಿಕಾರಿ: ಹೌದು ರಂಗಪ್ಪ, ತುಂಬ ಸರಿಯಾಗಿ ಹೇಳಿದೆ. ನದಿಗಳ ನೀರು ಹಾಗೇ ಹರಿಯೋಕೆ ಬಿಟ್ಟರೆ ವ್ಯರ್ಥವಾಗಿ ಸಮುದ್ರ ಸೇರಿಕೊಳ್ಳುತ್ತದೆ. ಅದೇ ನೀರಿಗೆ ಕಟ್ಟೆಕಟ್ಟಿ ಬೇಸಾಯಕ್ಕಾಗಲೀ, ವಿದ್ಯುತ್ ಉತ್ಪಾದನೆಗಾಗಲಿ ಅದನ್ನು ಬಳಸಿಕೊಂಡರೆ ಅದರಿಂದ ಮುಂದುವರಿಯುತ್ತದೆ. ಜನರ ಕೈಯಲ್ಲಿರುವ ಹಣವೂ ಹಾಗೆಯೇ. ಅದನ್ನು ಹಾಗೇ ಇಟ್ಟುಕೊಂಡರೆ ಅದು ವ್ಯರ್ಥವಾಗಿ ಖರ್ಚಾಗಿ ಹೋಗುತ್ತದೆ. ಅದರ ಬದಲು ತಮ್ಮಲ್ಲಿರುವ ಹಣವನ್ನು ಜನರು ಬ್ಯಾಂಕುಗಳಲ್ಲಿ ಇಟ್ಟರೆ ಬ್ಯಾಂಕುಗಳು ಈ ಹಣವನ್ನು ಸುರಕ್ಷಿತವಾಗಿ ಇಟ್ಟುಕೊಳ್ಳುತ್ತವೆ. ಹೀಗೆ ಇಟ್ಟುಕೊಂಡ ಹಣಕ್ಕೆ ಬಡ್ಡಿಯನ್ನು ಕೊಡುತ್ತವೆ. ಮತ್ತು ಈ ಹಣವನ್ನು ಬೇಸಾಯಕ್ಕೆ ಕೈಗಾರಿಕೆಗೆ ಸಾಲವಾಗಿ ಕೊಡುತ್ತದೆ. ಇದರಿಂದ ಬೇಸಾಯದಲ್ಲಿ, ಕೈಗಾರಿಕೆಯಲ್ಲಿ ಮುಂದುವರಿಯಬಹುದು. ನಾವೆಲ್ಲ ಮುಂದೆ ಬಂದರೆ ದೇಶವೂ ಮುಂದೆ ಬಂದಂತೆಯೇ ಅಲ್ಲವೇ?

ರಂಗಪ್ಪ: ಹೌದು ಸ್ವಾಮಿ, ನೀವು ಹೇಳುವುದು ಸರಿ. ಹಣವನ್ನು ಮನೆಯಲ್ಲಿ ಇಟ್ಟುಕೊಂಡರೆ ಕಳ್ಳರು ಬಂದು ಕದ್ದುಕೊಂಡು ಹೋಗಬಹುದು. ಬೆಂಕಿಯಲ್ಲಿ ಸುಟ್ಟು ಹೋಗಬಹುದು. ಇಲ್ಲಿ, ಜಿರಲೆ ಮುಂತಾದ ಪ್ರಾಣಿಗಳು ಅದನ್ನು ತಿಂದು ಹಾಕಬಹುದು.

ಆದರೆ ಬ್ಯಾಂಕಿನಲ್ಲಿ ಎಷ್ಟು ಠೇವಣಿ ಇಡಬಹುದು? ಹೀಗೆ ಇಟ್ಟ ಹಣ ಖಾತೆದಾರರಿಗೇ ವಾಪಸು ಖಂಡಿತವಾಗಿ ಸಿಕ್ಕುತ್ತದೆಯೇ?

ಅಧಿಕಾರಿ: ನೀನು ತುಂಬ ಒಳ್ಳೆಯ ಪ್ರಶ್ನೆ ಕೇಳಿದೆ ರಂಗಪ್ಪ. ಇಂತಹ ಪ್ರಶ್ನೆಯನ್ನು ಗ್ರಾಹಕರು ಆಗಾಗ ಕೇಳುತ್ತಿರುತ್ತಾರೆ. ಇದಕ್ಕೆ ಸ್ವಲ್ಪ ವಿವರವಾಗಿ ಉತ್ತರ ಹೇಳುತ್ತೇನೆ.

ಬ್ಯಾಂಕುಗಳು ಆರಂಭವಾಗಿದ್ದು ಹೀಗೆ

ಬ್ಯಾಂಕುಗಳು ಆರಂಭವಾಗುವ ಮೊದಲು ಜನರು ತಮ್ಮಲ್ಲಿದ್ದ ಹೆಚ್ಚುವರಿ ಹಣವನ್ನು ತಮ್ಮ ಮನೆಗಳಲ್ಲಿ ಮಡಕೆ, ಕುಡಕೆಗಳಲ್ಲಿ ತುಂಬಿ ಇಡುತ್ತಿದ್ದರು. ಕೆಲವೊಮ್ಮೆ ಯಾರಿಗೂ ತಿಳಿಯಬಾರದೆಂದು ಇಂಥ ಮಡಕೆಗಳನ್ನು ನೆಲದಲ್ಲಿ ಹೂತಿಡುತ್ತಿದ್ದರು. ಹಿಂದೆ

ಕೇವಲ ಲೋಹದ ನಾಣ್ಯಗಳೇ ಚಲಾವಣೆಯಲ್ಲಿದ್ದವು. ಹೀಗಾಗಿ ಅದು ಮಡಕೆಗಳಲ್ಲಿ ಇಟ್ಟರೂ ಭದ್ರವಾಗಿರುತ್ತಿತ್ತು. ಆದರೆ ಈ ಹಣ ಯಾವುದೇ ಉತ್ಪಾದಕ ಕೆಲಸಕ್ಕೆ ಬಳಕೆಯಾಗುತ್ತಿರಲಿಲ್ಲ. ಅದರ ಮೇಲೆ ಬಡ್ಡಿಯೂ ಬರುತ್ತಿರಲಿಲ್ಲ. ಕಳ್ಳರು ಇದನ್ನು ಕದ್ದುಕೊಂಡು ಹೋಗಬಹುದಾಗಿತ್ತು.

ಇದನ್ನು ಮನಗಂಡು ಕೆಲವು ವ್ಯಾಪಾರಿಗಳು ಮತ್ತು ಹಣವಂತರು ಜನರ ಹಣವನ್ನು ಇಟ್ಟುಕೊಳ್ಳುವ ವ್ಯವಸ್ಥೆ ಜಾರಿಗೆ ತಂದರು. ಇವರು ಹಣ ಇದ್ದವರಿಂದ ಅದನ್ನು ಸ್ವೀಕರಿಸುತ್ತಿದ್ದರು. ಯಾರಿಗೆ ಹಣದ ಅಗತ್ಯ ಇದೆಯೋ ಅಂತಹವರಿಗೆ ಹಣವನ್ನು ಸಾಲವಾಗಿ ಕೊಡುತ್ತಿದ್ದರು. ಇಂತಹವರನ್ನು ಲೇವಾದೇವಿ ಮಾಡುವವರು ಎನ್ನುತ್ತಿದ್ದರು. ಇವರೇ ಈಗಿನ ಬ್ಯಾಂಕಿಂಗ್ ವ್ಯವಸ್ಥೆಯನ್ನು ಆರಂಭಿಸಿದವರು ಎನ್ನಬಹುದು. ಇವರಲ್ಲಿ ಬಹುಪಾಲು ಜನರು ಬ್ಯಾಂಕಿಂಗ್ ವ್ಯವಹಾರ ಮತ್ತು ತಮ್ಮ ವ್ಯಾಪಾರ ಇವೆರಡನ್ನೂ ಮಾಡುತ್ತಿದ್ದರು.

ಹದಿನೆಂಟನೇ ಶತಮಾನದಲ್ಲಿ ಕೆಲವು ಜನರು ಸೇರಿಕೊಂಡು ಬ್ಯಾಂಕುಗಳನ್ನು ಆರಂಭಿಸಿದರು. ಈ ಬ್ಯಾಂಕುಗಳು ಜನರಿಂದ ಹಣವನ್ನು ಠೇವಣಿ ರೂಪದಲ್ಲಿ ಸಂಗ್ರಹಿಸಿ ಸಾಲಗಾರರಿಗೆ ನೀಡಲು ತೊಡಗಿದವು. ಈ ಬ್ಯಾಂಕುಗಳಿಗೆ ಕೆಲವು ತೊಡಕುಗಳಿದ್ದವು. ಸಾಲಗಾರರು ಸಾಲ ವಾಪಸು ಮಾಡದೇ ಇದ್ದಾಗ ಇವುಗಳ ಪರಿಸ್ಥಿತಿಯೂ ಚಿಂತಾಜನಕವಾಗುತ್ತಿತ್ತು. ಇವುಗಳು ಭದ್ರ ಬುನಾದಿಯ ಮೇಲೆ ನಿಂತಿರಲಿಲ್ಲ. ಹೆಚ್ಚು ಹೆಚ್ಚು ಠೇವಣಿ ಸಂಗ್ರಹಿಸಲು ಇವು ತಮ್ಮ ತಮ್ಮಲ್ಲೇ ಸ್ಪರ್ಧೆಗೆ ತೊಡಗುತ್ತಿದ್ದವು. ಇದರಿಂದಾಗಿ ಇವುಗಳಿಗೆ ಬರುವ ಲಾಭ ಕಡಿಮೆಯಾಗ ತೊಡಗಿತು. ಬ್ಯಾಂಕುಗಳಲ್ಲಿ ಹಣ ಠೇವಣಿ ಇಟ್ಟ ಗ್ರಾಹಕರಿಗೆ ಹಣ ಮರಳಿ ದೊರೆಯುತ್ತಿರಲಿಲ್ಲ. ಬ್ಯಾಂಕುಗಳು ಆರಂಭವಾದ ಕೆಲವೇ ದಿನಗಳಲ್ಲಿ ಬಾಗಿಲು ಮುಚ್ಚಿಬಿಡುತ್ತಿದ್ದವು.

ಆದರೆ ಪರಿಸ್ಥಿತಿ ಈಗ ಹಾಗಿಲ್ಲ. ಸಾವಿರದ ಒಂಭೈನೂರಾ ಮುವತ್ತೈದರಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್‌ಅನ್ನು ಆರಂಭಿಸಲಾಯಿತು. ಇದು ನಮ್ಮ ಬ್ಯಾಂಕುಗಳ ಕುಟುಂಬಕ್ಕೆ ಯಜಮಾನ. ಬ್ಯಾಂಕುಗಳು ಆರೋಗ್ಯಕರವಾಗಿ ಹೇಗೆ ಬೆಳೆಯಬೇಕು ಎಂಬುದನ್ನು ರಿಸರ್ವ್ ಬ್ಯಾಂಕು ನಿರ್ಧರಿಸುತ್ತದೆ. ಯಾವುದೇ ಹೊಸ ಬ್ಯಾಂಕು ಆರಂಭಗೊಳ್ಳಲು ರಿಸರ್ವ್ ಬ್ಯಾಂಕಿನ ಅನುಮತಿ ಪಡೆಯಬೇಕು. ಠೇವಣಿಗಳ ಮೇಲೆ ಎಲ್ಲ ಬ್ಯಾಂಕುಗಳು ನೀಡಬೇಕಾದ ಬಡ್ಡಿದರ ಒಂದೇ ಆಗಿರುವಂತೆ ರಿಸರ್ವ್ ಬ್ಯಾಂಕು ನೋಡಿಕೊಳ್ಳುತ್ತದೆ. ಬ್ಯಾಂಕುಗಳು ನೀಡುವ ಸಾಲದ ಮೇಲೆ ವಸೂಲು ಮಾಡಬೇಕಾದ ಬಡ್ಡಿ ದರವನ್ನೂ ರಿಸರ್ವ್ ಬ್ಯಾಂಕು ನಿರ್ಧರಿಸುತ್ತದೆ.

ಬ್ಯಾಂಕುಗಳು ತಾವು ಸಂಗ್ರಹಿಸುವ ಅಷ್ಟು ಹಣವನ್ನು ಸಾಲದ ರೂಪದಲ್ಲಿ ನೀಡುವಂತಿಲ್ಲ. ಹೀಗೆ ಸಂಗ್ರಹಿಸಿದ ಹಣದ ಒಂದು ಭಾಗವನ್ನು ಸರ್ಕಾರದ ಸಾಲಪತ್ರಗಳಲ್ಲಿ ಬ್ಯಾಂಕು ಹೂಡಬೇಕು. ಇದರಿಂದ ಸರ್ಕಾರ ಕೈಗೊಳ್ಳುವ ಅಭಿವೃದ್ಧಿ ಕಾರ್ಯಗಳಿಗೆ ಹಣವೂ ದೊರೆಯುತ್ತದೆ. ಜನರ ಠೇವಣಿ ಹಣವೂ ಸುರಕ್ಷಿತವಾಗಿರುತ್ತದೆ.

ಯಾವುದೇ ಬ್ಯಾಂಕು ದಿವಾಳಿಯಾದರೆ, ಅಂತಹ ಸಂದರ್ಭದಲ್ಲಿ ಗ್ರಾಹಕರಿಗೆ ನಷ್ಟ ಆಗಬಾರದು. ಇದನ್ನು ಗಮನದಲ್ಲಿಟ್ಟುಕೊಂಡು ರಿಸರ್ವ್ ಬ್ಯಾಂಕು "ಠೇವಣಿ ವಿಮೆ ಮತ್ತು ಉದರಿ ಖಾತರಿ ನಿಗಮ" ಎಂಬ ಸಂಸ್ಥೆಯನ್ನು ಆರಂಭಿಸಿದೆ. ಯಾವುದೇ ಬ್ಯಾಂಕಿನಲ್ಲಿ ಗ್ರಾಹಕರು ಠೇವಣಿಯಾಗಿರಿಸಿದ ಒಂದು ಲಕ್ಷ ರೂಪಾಯಿಗೆ ಒಳಪಟ್ಟ ಮೊತ್ತವನ್ನು, ಬ್ಯಾಂಕು ದಿವಾಳಿ ಎದ್ದ ಸಂದರ್ಭದಲ್ಲಿ, ಈ ಸಂಸ್ಥೆ ವಾಪಸು ಕೊಡುತ್ತದೆ.

ಹೀಗೆ ರಿಸರ್ವ್ ಬ್ಯಾಂಕು ಕೈಗೊಂಡಿರುವ ಹಲವಾರು ಕ್ರಮಗಳಿಂದಾಗಿ ಗ್ರಾಹಕರು ಬ್ಯಾಂಕುಗಳಲ್ಲಿಡುವ ಠೇವಣಿ ಹಣ ಸಂಪೂರ್ಣ ಸುರಕ್ಷಿತ ಎನ್ನಬಹುದು.

ಬ್ಯಾಂಕುಗಳಲ್ಲಿ ಎಷ್ಟು ವಿಧ?

ಅಧಿಕಾರಿಗಳ ಈ ಮಾತುಗಳನ್ನು ರಂಗಪ್ಪನಲ್ಲದೆ ಸುಧಾಕರ, ದಿವಾಕರ ಮತ್ತು ಮಾಸ್ತರರೂ ಕೇಳಿಸಿಕೊಳ್ಳುತ್ತಿದ್ದರು. ಮೈಸೂರಿನಲ್ಲಿ ನೌಕರಿ ಮಾಡುತ್ತಿರುವ ಸುಧಾಕರ ಕೇಳಿದ.

ಸುಧಾಕರ: ಸ್ವಾಮಿ, ನಮ್ಮ ಬೆಟ್ಟದಪುರ ಗ್ರಾಮದಲ್ಲಿ ಒಂದೇ ಒಂದು ಬ್ಯಾಂಕು ಇದೆ. ಆದರೆ ಮೈಸೂರು, ಬೆಂಗಳೂರುಗಳಂತಹ ದೊಡ್ಡ ಪಟ್ಟಣಗಳಲ್ಲಿ ಹಲವಾರು ಬ್ಯಾಂಕುಗಳ ಶಾಖೆಗಳು ಇವೆ. ಈ ಎಲ್ಲ ಬ್ಯಾಂಕುಗಳೂ ಒಂದೇ ಸ್ವರೂಪದವೋ ಅಥವಾ ಅವುಗಳ ನಡುವೆ ಏನಾದರೂ ವ್ಯತ್ಯಾಸ ಇದೆಯೋ?

ಸಾರ್ವಜನಿಕ ವಲಯದ ಬ್ಯಾಂಕುಗಳು

ಅಧಿಕಾರಿ: ಇದೂ ಒಂದು ಒಳ್ಳೆಯ ಪ್ರಶ್ನೆ. ಈಗ ನಮ್ಮ ದೇಶದಲ್ಲಿ ಇರುವ ಬ್ಯಾಂಕುಗಳನ್ನು ಆರು ಗುಂಪುಗಳಾಗಿ ವಿಂಗಡಿಸಬಹುದು. ಮೊದಲನೆಯದ್ದು ಭಾರತ ಸರ್ಕಾರದ ಮಾಲೀಕತ್ವದಲ್ಲಿರುವ ಹತ್ತೊಂಬತ್ತು ಬ್ಯಾಂಕುಗಳ ಒಂದು ಗುಂಪು. ಇವುಗಳನ್ನು 'ರಾಷ್ಟ್ರೀಕೃತ' ಬ್ಯಾಂಕುಗಳೆಂದು ಕರೆಯುತ್ತಾರೆ. ರಾಷ್ಟ್ರೀಕೃತ ಎಂದರೆ ಕೇಂದ್ರ ಸರ್ಕಾರವೇ ವಹಿಸಿಕೊಂಡಿರುವ ಎಂದು ಅರ್ಥ. ಬ್ಯಾಂಕುಗಳನ್ನು ಮೊದಲು ದೇಶದ ಬೇರೆ ಬೇರೆ ಭಾಗಗಳಲ್ಲಿ ಖಾಸಗಿ ಜನರು ಸ್ಥಾಪಿಸಿದರು. ಈ ಬ್ಯಾಂಕುಗಳು ಕೇವಲ ಲಾಭದ ಆಸೆಯಿಂದ ಕೆಲಸ ಮಾಡುತ್ತಿದ್ದವು. ಸಿರಿವಂತರಿಗೆ ಮಾತ್ರ ಸಾಲ ಕೊಡುತ್ತಿದ್ದವು. ಬಡವರು, ಹಿಂದುಳಿದವರಿಗೆ ಈ ಬ್ಯಾಂಕುಗಳಿಂದ ಯಾವುದೇ ನೆರವು ದೊರೆಯುತ್ತಿರಲಿಲ್ಲ.

ಭಾರತ ಸರ್ಕಾರವು ಇದನ್ನು ಮನಗಂಡು, ಸಾವಿರದ ಒಂಭೈನೂರ ಅರವತ್ತೊಂಭತ್ತನೇಯ ಇಸವಿಯಲ್ಲಿ ಹದಿನಾಲ್ಕು ದೊಡ್ಡ ಬ್ಯಾಂಕುಗಳನ್ನು ತನ್ನ ವಶಕ್ಕೆ

ತೆಗೆದುಕೊಂಡಿತು. ಹನ್ನೊಂದು ವರ್ಷಗಳ ನಂತರ ಮತ್ತೆ ಆರು ಬ್ಯಾಂಕುಗಳನ್ನು ವಹಿಸಿಕೊಂಡಿತು. ಹೀಗೆ ಒಟ್ಟು ಇಪ್ಪತ್ತು ಬ್ಯಾಂಕುಗಳು ಭಾರತ ಸರ್ಕಾರದ ಆಡಳಿತಕ್ಕೆ ಒಳಪಟ್ಟವು. ಸಾವಿರದ ಒಂಭೈನೂರ ತೊಂಭತ್ತಮೂರರಲ್ಲಿ ಇಂತಹ ಎರಡು ಬ್ಯಾಂಕುಗಳನ್ನು ಒಂದುಗೂಡಿಸಿದ್ದರಿಂದಾಗಿ, ಇವುಗಳ ಸಂಖ್ಯೆ ಹತ್ತೊಂಬತ್ತಕ್ಕೆ ಇಳಿದಿದೆ.

ಎರಡನೆಯದು ಸ್ಟೇಟ್ ಬ್ಯಾಂಕ್ ಸಮೂಹ. ಬ್ರಿಟಿಷ್ ಆಡಳಿತದ ಕಾಲದಲ್ಲಿ ಇದ್ದ "ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ"ವನ್ನು ಭಾರತ ಸರ್ಕಾರವು ಸಾವಿರದ ಒಂಭೈನೂರ ಐವತ್ತೈದರಲ್ಲಿ 'ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ' ಎಂದು ಕರೆಯಿತು. ಮತ್ತು ಬೇರೆ ಬೇರೆ ರಾಜರುಗಳ ಸಂಸ್ಥಾನಗಳಲ್ಲಿದ್ದ ಬ್ಯಾಂಕುಗಳನ್ನು ಇದರ ಸಹಾಯಕ ಸಂಸ್ಥೆಗಳನ್ನಾಗಿ ಮಾಡಿತು. ಮೈಸೂರು, ಪಾಟಿಯಾಲ, ತಿರುವಾಂಕೂರು, ಬಿಕಾನೇರ್ ಮತ್ತು ಜೈಪುರ, ಇಂದೋರ್, ಹೈದರಾಬಾದು, ಸೌರಾಷ್ಟ್ರ- ಬ್ಯಾಂಕುಗಳನ್ನು ಭಾರತೀಯ ಸ್ಟೇಟ್ ಬ್ಯಾಂಕಿನ 'ಸಹವರ್ತಿ' ಬ್ಯಾಂಕುಗಳೆಂದು ಕರೆಯಲಾಯಿತು.

ಈ ಮೊದಲಿನ ಮತ್ತು ಎರಡನೆ ಗುಂಪಿನ ಬ್ಯಾಂಕುಗಳ ಮೇಲೆ ಭಾರತ ಸರ್ಕಾರದ ನೇರ ನಿಯಂತ್ರಣವಿದೆ. ಆದ್ದರಿಂದ ಇವುಗಳನ್ನು 'ಸಾರ್ವಜನಿಕ ವಲಯ'ದ ಬ್ಯಾಂಕುಗಳೆಂದು ಕರೆಯಲಾಗುತ್ತದೆ.

ಮೂರನೆಯ ಗುಂಪು ಖಾಸಗಿ ಬ್ಯಾಂಕುಗಳದ್ದು. ಈ ಬ್ಯಾಂಕುಗಳು ಖಾಸಗಿ ಜನರಿಂದ ಸ್ಥಾಪನೆಗೊಂಡಿವೆ. ಈಗಲೂ ಖಾಸಗೀ ಜನರ ಒಡೆತನದಲ್ಲೇ ಇವೆ. ಈ ಗುಂಪಿನಲ್ಲಿ ಇಪ್ಪತ್ತಕ್ಕೂ ಹೆಚ್ಚು ಬ್ಯಾಂಕುಗಳಿವೆ.

ಗ್ರಾಮೀಣ ಬ್ಯಾಂಕುಗಳು

ನಾಲ್ಕನೆಯ ಗುಂಪು ಗ್ರಾಮೀಣ ಬ್ಯಾಂಕುಗಳದ್ದು. ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯನ್ನೇ ಗಮನದಲ್ಲಿಟ್ಟುಕೊಂಡು ಈ ಬ್ಯಾಂಕುಗಳನ್ನು ಸ್ಥಾಪಿಸಲಾಗಿದೆ. ಒಂದೊಂದು ಬ್ಯಾಂಕಿನ ಕಾರ್ಯಕ್ಷೇತ್ರವನ್ನು ಕೆಲವೇ ಜಿಲ್ಲೆಗಳಿಗೆ ಸೀಮಿತಗೊಳಿಸಲಾಗಿದೆ. ಇವು ಒಂದು ಗೊತ್ತಾದ ಪ್ರದೇಶದಲ್ಲಿ ಕೆಲಸ ಮಾಡುತ್ತವೆ. ಆದ್ದರಿಂದ ಇವುಗಳನ್ನು 'ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು' ಎಂದು ಕರೆಯುತ್ತಾರೆ. ಗ್ರಾಮಗಳ ಜನರಿಂದ ಹಣವನ್ನು ಸಂಗ್ರಹಿಸುವುದು ಮತ್ತು ಗ್ರಾಮಗಳ ಜನರಿಗೆ ಕೃಷಿ, ಪಶುಪಾಲನೆ, ಗೃಹಕೈಗಾರಿಕೆ, ಮೀನುಗಾರಿಕೆ, ಸಣ್ಣ ಪುಟ್ಟ ಚಿಲ್ಲರೆ ವ್ಯಾಪಾರ - ಮುಂತಾದ ಚಟುವಟಿಕೆಗಳಿಗೆ ಹಣಕಾಸು ನೆರವು ನೀಡುವುದು ಈ ಬ್ಯಾಂಕುಗಳ ಮುಖ್ಯ ಕೆಲಸ. ನಮ್ಮ ದೇಶದಲ್ಲಿ ಈಗ ಒಂದುನೂರಾ ತೊಂಬತ್ತಕ್ಕೂ ಹೆಚ್ಚು ಗ್ರಾಮೀಣ ಬ್ಯಾಂಕುಗಳಿವೆ.

ಸಹಕಾರೀ ಬ್ಯಾಂಕುಗಳು

ಐದನೆಯ ಗುಂಪು ಸಹಕಾರೀ ಬ್ಯಾಂಕುಗಳದ್ದು. ಇವುಗಳನ್ನು ಪಟ್ಟಣ ಸಹಕಾರೀ ಬ್ಯಾಂಕು ಮತ್ತು ಗ್ರಾಮ ಸಹಕಾರೀ ಬ್ಯಾಂಕು ಎಂದು ಎರಡು ವರ್ಗ ಮಾಡಬಹುದು.

ಪಟ್ಟಣ ಸಹಕಾರೀ ಬ್ಯಾಂಕುಗಳು ಪಟ್ಟಣ ಪ್ರದೇಶದಲ್ಲಿ ಮಾತ್ರ ಇರುತ್ತವೆ. ಇವುಗಳಿಗೆ ಹೆಚ್ಚಾಗಿ ಶಾಖೆಗಳು ಇರುವುದಿಲ್ಲ. ಒಂದು ಪಟ್ಟಣದಲ್ಲಿ ವಾಸಿಸುವ ಜನರು ತಮ್ಮ ಬ್ಯಾಂಕಿಂಗ್ ಅಗತ್ಯಗಳಿಗಾಗಿ ಈ ರೀತಿಯ ಬ್ಯಾಂಕುಗಳನ್ನು ಸ್ಥಾಪಿಸಿಕೊಳ್ಳಬಹುದು. ಈ ಬ್ಯಾಂಕುಗಳು ರಾಜ್ಯ ಸಹಕಾರಿ ಸಂಘಗಳ ನಿಯಮಗಳಿಗೆ ಅನುಗುಣವಾಗಿ ಕೆಲಸ ಮಾಡುತ್ತವೆ. ರಿಸರ್ವ್ ಬ್ಯಾಂಕು ಈ ಬ್ಯಾಂಕುಗಳ ಹಣಕಾಸು ವ್ಯವಹಾರಗಳನ್ನು ಆಗಾಗ ತನಿಖೆ ಮಾಡುತ್ತದೆ. ಸಹಕಾರದ ಮನೋಭಾವ ಜನರಲ್ಲಿ ಹೆಚ್ಚಾಗಿ ಬೆಳೆಯಲಿ ಎಂಬುದು ಸರ್ಕಾರದ ಆಸೆ. ಅದರಂತೆ ಈ ಬ್ಯಾಂಕುಗಳಿಗೆ ಬೇರೆ ಬ್ಯಾಂಕುಗಳಿಗಿಂತ ಸ್ವಲ್ಪ ಹೆಚ್ಚು ಬಡ್ಡಿ ನೀಡುವ ಅವಕಾಶ ಕೊಡಲಾಗಿದೆ.

ಗ್ರಾಮ ಸಹಕಾರಿ ಬ್ಯಾಂಕುಗಳು ರಾಜ್ಯ ಸರ್ಕಾರದ ಅಧೀನದಲ್ಲಿವೆ. ಇವುಗಳನ್ನು ಪ್ರಾಥಮಿಕ ಕೃಷಿ ಮತ್ತು ಭೂಅಭಿವೃದ್ಧಿ ಬ್ಯಾಂಕ್ ಎಂದು ಕರೆಯುತ್ತಾರೆ . ಬೇಸಾಯ ಮತ್ತು ಅದಕ್ಕೆ ಸಂಬಂಧಿಸಿದ ಉದ್ಯಮಗಳಿಗೆ ನೆರವು ನೀಡುವುದು ಇವುಗಳ ಮುಖ್ಯ ಕೆಲಸ. ಇವು ಉಳಿದ ಬ್ಯಾಂಕಿಂಗ್ ಕೆಲಸಗಳನ್ನು ಅಷ್ಟಾಗಿ ನಿರ್ವಹಿಸುವುದಿಲ್ಲ.

ವಿಶ್ವ ಬ್ಯಾಂಕು

ಅಧಿಕಾರಿಗಳ ಈ ಮಾತುಗಳನ್ನು ಕೇಳುತ್ತಲೇ ಸುಧಾಕರನ ಮನಸ್ಸಿನಲ್ಲಿ ಒಂದು ಸಂಶಯ ಮೂಡಿತು. ಅವನು ಕಾಲೇಜಿನಲ್ಲಿ ಓದಿ ಪದವಿ ಗಳಿಸಿಕೊಂಡವನು. ಈಗ ನೌಕರಿಯಲ್ಲಿ ಇದ್ದಾನೆ. ಪ್ರತಿ ದಿನ ಸುದ್ದಿ ಪತ್ರಿಕೆಗಳನ್ನು ಓದುತ್ತಾನೆ. ಹಾಗಾಗಿ ಅವನ ಮನಸ್ಸಿನಲ್ಲಿ ಸಂಶಯ ಮೂಡಿತು.

ಸುಧಾಕರ: ಸ್ವಾಮಿ, ಆಗಾಗ ಪತ್ರಿಕೆಗಳಲ್ಲಿ 'ವಿಶ್ವ ಬ್ಯಾಂಕ್ ನೆರವು' ಅಂತ ಬರುತ್ತಲ್ಲ, ಈ ವಿಶ್ವಬ್ಯಾಂಕು ಕೂಡಾ ಉಳಿದ ಬ್ಯಾಂಕುಗಳ ಹಾಗೆ ಒಂದು ಬ್ಯಾಂಕು ತಾನೇ?

ಅಧಿಕಾರಿ: ಅಲ್ಲ, ಇದು ಉಳಿದ ಬ್ಯಾಂಕುಗಳ ಹಾಗೆ ಒಂದು ಬ್ಯಾಂಕು ಅಲ್ಲ. ಯಾಕೆಂದರೆ ವ್ಯಕ್ತಿಗಳು ಇದರ ಗ್ರಾಹಕರಾಗಿರುವುದಿಲ್ಲ. ಇದು ಜನರಿಂದ ಠೇವಣಿ ಸಂಗ್ರಹಿಸುವುದಿಲ್ಲ.

ಬದಲಾಗಿ, ಇದು ತನ್ನ ಸದಸ್ಯ ದೇಶಗಳಿಂದ ಬಂಡವಾಳ ಸಂಗ್ರಹಿಸುತ್ತದೆ. ಯಾವ ಯಾವ ಬಡ ದೇಶಗಳಿಗೆ ಹಣದ ನೆರವಿನ ಅಗತ್ಯ ಇದೆಯೋ ಅಂತಹ ದೇಶಗಳಿಗೆ ತೀರಾ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುತ್ತದೆ. ಈ ರೀತಿ ಬಡ ದೇಶಗಳಿಗೆ ನೆರವು ನೀಡುವ ಇನ್ನೂ ಎರಡು ಸಂಸ್ಥೆಗಳಿವೆ. ಐ.ಎಂ.ಎಫ್ ಅಥವಾ ಅಂತರರಾಷ್ಟ್ರೀಯ ಹಣ ನಿಧಿ, ಮತ್ತು ಏಷ್ಯನ್ ಅಭಿವೃದ್ಧಿ ಬ್ಯಾಂಕು - ಇವೇ ಆ ಎರಡು ಸಂಸ್ಥೆಗಳು.

ಅಂಚೆ ಕಚೇರಿ ಯೋಜನೆಗಳು

ದಿವಾಕರ: ಸ್ವಾಮಿ, ನೀವು ಠೇವಣಿ ಸಂಗ್ರಹಿಸುವ ವಿಷಯ ಹೇಳಿದಾಗ ನೆನಪಾಯಿತು. ಅಂಚೆ ಕಚೇರಿಗಳಲ್ಲೂ ಜನರು ಠೇವಣಿ ಇಡುತ್ತಾರೆ, ಅಲ್ಲವೆ?

ಅಧಿಕಾರಿ: ಹೌದು, ನೀವು ಹೇಳಿದ್ದು ಸರಿ. ಜನರಿಂದ ಉಳಿತಾಯದ ಹಣವನ್ನು ಸಂಗ್ರಹಿಸುವ ಕೆಲಸವನ್ನು ಕೇವಲ ಬ್ಯಾಂಕುಗಳು ಮಾತ್ರ ಮಾಡುವುದಿಲ್ಲ. ಅಂಚೆ ಕಚೇರಿಯೂ ಜನರಿಂದ ಬೇರೆ ಬೇರೆ ಯೋಜನೆಗಳ ಮೂಲಕ ಹಣ ಸಂಗ್ರಹಿಸುತ್ತದೆ. ಯೂನಿಟ್ ಟ್ರಸ್ಟ್‌ನಂತಹ ಕೆಲವು ಸಂಸ್ಥೆಗಳೂ ಈ ಕೆಲಸ ಮಾಡುತ್ತವೆ. ಆದರೆ ಈ ಸಂಸ್ಥೆಗಳು ಜನರಿಗೆ ಯಾವುದೇ ಸಾಲ ನೀಡುವುದಿಲ್ಲ. ಅಂಚೆ ಕಚೇರಿ ಸಂಗ್ರಹಿಸುವ ಹಣವು ಕೇಂದ್ರ ಸರ್ಕಾರಕ್ಕೆ, ರಾಜ್ಯ ಸರ್ಕಾರಗಳಿಗೆ ಹರಿದು ಬರುತ್ತದೆ. ಈ ಹಣದಿಂದ ಈ ಸರ್ಕಾರಗಳು ಜನರಿಗೆ ಉಪಯೋಗವಾಗುವಂತಹ ಕಾರ್ಯಗಳನ್ನು ಕೈಗೊಳ್ಳುತ್ತವೆ.

ಇವರೆಲ್ಲ ಮಾತುಕತೆಯಲ್ಲಿ ತೊಡಗಿರುವಾಗ ಮಾಸ್ತರರ ಮನೆಯಾಕೆ ಎಲ್ಲರಿಗೂ ಊಟವನ್ನು ಸಿದ್ಧಪಡಿಸಿದರು. ಎಲ್ಲರನ್ನು ಊಟಕ್ಕೆ ಕರೆದರು. ಎಲ್ಲರೂ ಊಟವನ್ನು ಮಾಡಿದರು.

ಬ್ಯಾಂಕುಗಳು ನೀಡುವ ಸೇವೆಗಳು

ಊಟವಾದ ನಂತರ ಎಲ್ಲರೂ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದರು. ಆಗ ಮಾಸ್ತರರು ಅಧಿಕಾರಿಗಳನ್ನು ಕೇಳಿದರು.

ಮಾಸ್ತರರು: ಸ್ವಾಮಿ, ರಂಗಪ್ಪ ಹೊಸದಾಗಿ ನಿಮ್ಮ ಬ್ಯಾಂಕಿನ ಗ್ರಾಹಕನಾಗಿದ್ದಾನೆ. ಗ್ರಾಹಕರಿಗೆ ಬ್ಯಾಂಕುಗಳು ಯಾವ ಯಾವ ಸೇವೆಗಳನ್ನು ನೀಡುತ್ತವೆ ಎಂದು ದಯವಿಟ್ಟು ತಿಳಿಸಿಕೊಡಿ.

ಅಧಿಕಾರಿ: ಆಗಲಿ ಮಾಸ್ತರರೇ, ಬ್ಯಾಂಕುಗಳು ಜನರಿಂದ ಹಣವನ್ನು ಠೇವಣಿಯಾಗಿ ಸ್ವೀಕರಿಸುತ್ತವೆ. ಠೇವಣಿಯ ಅವಧಿಗೆ ಹೊಂದಿಕೊಂಡು ಬಡ್ಡಿದರಗಳಿವೆ. ಕಡಿಮೆ ಅವಧಿಗೆ ಇಟ್ಟ ಠೇವಣಿಗೆ ಕಡಿಮೆ ಬಡ್ಡಿ. ಹೆಚ್ಚು ಅವಧಿಗೆ ಇಟ್ಟ ಠೇವಣಿಗೆ ಹೆಚ್ಚು ಬಡ್ಡಿ. ಈ ದೇಶದ ನಿಯಮಗಳ ಪ್ರಕಾರ ಎಲ್ಲ ವಾಣಿಜ್ಯ ಬ್ಯಾಂಕುಗಳೂ ಒಂದೇ ದರದಲ್ಲಿ ಬಡ್ಡಿ ನೀಡಬೇಕು. ಮತ್ತು ಬಡ್ಡಿ ಕೊಡುವ ವಿಷಯದಲ್ಲಿ ಗ್ರಾಹಕರ ನಡುವೆ ಭೇದಭಾವ ಮಾಡುವಂತಿಲ್ಲ. ಬ್ಯಾಂಕುಗಳು ಗ್ರಾಹಕರಿಗೆ ಬೇರೆ ಬೇರೆ ಉದ್ದೇಶಗಳಿಗಾಗಿ ಸಾಲಗಳನ್ನೂ ಕೊಡುತ್ತವೆ. ಇವೆರಡೂ ಬ್ಯಾಂಕುಗಳು ಗ್ರಾಹಕರಿಗೆ ಒದಗಿಸುವ ಮುಖ್ಯ ಸೇವೆಗಳು.

ಡಿ.ಡಿ ಮತ್ತು ಎಂ.ಟಿ

ಬ್ಯಾಂಕುಗಳು ಇನ್ನೂ ಕೆಲವು ಸೇವೆಗಳನ್ನು ಒದಗಿಸುತ್ತವೆ. ಅವು ಮುಖ್ಯವಾಗಿ ಹಣ ರವಾನೆಗೆ ಸಂಬಂಧಪಟ್ಟವು. ಡಿ.ಡಿ ಅಥವಾ ಡಿಮಾಂಡ್ ಡ್ರಾಫ್ಟ್ ಮತ್ತು ಎಂ.ಟಿ ಅಥವಾ ಮೈಲ್ ಟ್ರಾನ್ಸ್‌ಫರ್. ಇವು ಅಂತಹ ಎರಡು ಸೇವೆಗಳು.

ರಂಗಪ್ಪ: ಡಿ.ಡಿ ಅಂದರೆ ನಮ್ಮ ಸುಧಾಕರ ಮೊನ್ನೆ ಕಳಿಸಿದ್ದನಲ್ಲ, ಅದೇ ತಾನೇ?

ಅಧಿಕಾರಿ: ಹೌದು. ಗ್ರಾಹಕರು ಒಂದು ಊರಿನಿಂದ ಇನ್ನೊಂದು ಊರಿಗೆ ಹಣ ರವಾನಿಸಲು ಈ ಡಿ.ಡಿಗಳನ್ನು ಬ್ಯಾಂಕುಗಳಲ್ಲಿ ಖರೀದಿಸಬಹುದು. ಇದನ್ನು ಯಾರಿಗೆ ಹಣ ಕಳಿಸಬೇಕೋ ಅವರ ಹೆಸರಿನಲ್ಲಿ ಖರೀದಿಸಬಹುದು. ಇದನ್ನು ನೀಡಲು ಬ್ಯಾಂಕು ಸ್ವಲ್ಪ ಶುಲ್ಕವನ್ನು ಪಡೆಯುತ್ತದೆ. ಇದರಲ್ಲಿ ಹಣವನ್ನು ಯಾರಿಗೆ ನೀಡಬೇಕೋ ಅವರ ಹೆಸರು, ಯಾವ ಊರಿನಲ್ಲಿ ನೀಡಬೇಕೋ ಆ ಊರಿನ ಹೆಸರು ಮತ್ತು ಕಳಿಸುತ್ತಿರುವ ಹಣದ ಮೊತ್ತ - ಇವುಗಳನ್ನು ಬರೆದಿರುತ್ತಾರೆ. ಈ ಡಿ.ಡಿಯನ್ನು ಪಡೆದ ಗ್ರಾಹಕರು ಯಾರಿಗೆ ಹಣ ತಲುಪಬೇಕೋ ಅವರಿಗೆ ಅಂಚೆ ಮೂಲಕ ಕಳಿಸಬೇಕು. ಅಥವಾ ತಾವೇ ಖುದ್ದಾಗಿ ಹೋಗಿ ಕೊಡಬಹುದು. ಡಿ.ಡಿಯನ್ನು ಪಡೆದವರು ಆ ಹಣವನ್ನು ತಮ್ಮ ಖಾತೆಗೆ ಜಮಾ ಮಾಡಿಕೊಳ್ಳಬಹುದು.

ದಿವಾಕರ: ಹಾಗಾದರೆ ಎಂ.ಟಿ. ಅಂದರೇನು?

ಅಧಿಕಾರಿ: ಎಂ.ಟಿ ಎಂಬುದು ಮೈಲ್ ಟ್ರಾನ್ಸ್‌ಫರ್ ಎಂಬುದರ ಚಿಕ್ಕರೂಪ. ಇದರ ಅರ್ಥ ಅಂಚೆಯ ಮೂಲಕ ಹಣ ವರ್ಗಾವಣೆ ಎಂದು. ಇದರಿಂದ ಒಂದೇ ಬ್ಯಾಂಕಿನ ಎರಡು ಬೇರೆ

ಬೇರೆ ಶಾಖೆಗಳ ನಡುವೆ ಹಣ ವರ್ಗಾವಣೆ ಮಾಡಬಹುದು. ಈ ಕೆಲಸಕ್ಕೂ ಬ್ಯಾಂಕು ಸ್ವಲ್ಪ ಶುಲ್ಕ ಪಡೆಯುತ್ತದೆ.

ನೀವೆಲ್ಲ ಮನಿ ಆರ್ಡರ್ ಎಂಬ ಅಂಚೆ ಸೇವೆಯ ಬಗ್ಗೆ ಕೇಳಿದ್ದೀರಿ ಅಲ್ಲವೆ? ಇದೂ ಅದೇ ರೀತಿಯ ಒಂದು ಸೇವೆ. ಡಿ.ಡಿಗೂ ಎಂಟಿಗೂ ಒಂದು ವ್ಯತ್ಯಾಸವಿದೆ. ಎಂ.ಟಿಯನ್ನು ಯಾರಿಗೆ ಕಳಿಸಬೇಕೋ ಅವರ ಖಾತೆಯ ಸಂಖ್ಯೆ ಹಣ ಕಳಿಸುವವರಿಗೆ ಗೊತ್ತಿರಬೇಕು. ಎಂ.ಟಿಯನ್ನು ಕಳಿಸಲು ಹಣ ಪಡೆದ ಬ್ಯಾಂಕು ಹಣದ ಎಂ.ಟಿಯನ್ನು ತಾನೇ ಅಂಚೆಯ ಮೂಲಕ ಕಳಿಸುತ್ತದೆ. ಎಂ.ಟಿಯನ್ನು ಸ್ವೀಕರಿಸುವ ಬ್ಯಾಂಕು ಯಾರಿಗೆ ಹಣ ಕಳಿಸಲಾಗಿದೆಯೋ ಆ ಗ್ರಾಹಕರ ಖಾತೆಗೆ ಹಣವನ್ನು ತಾನಾಗಿ ಜಮಾ ಮಾಡುತ್ತದೆ.

ದಿವಾಕರ: ಟಿ.ಟಿ. ಅಂತಲೂ ಒಂದು ಸೇವೆ ಇದೆಯಂತೆ ಹೌದೇ?

ಅಧಿಕಾರಿ: ಹೌದು. ಹಣವನ್ನು ತುಂಬ ಶೀಘ್ರವಾಗಿ ಕಳಿಸಬೇಕಾದಾಗ ಈ ಸೇವೆಯನ್ನು ಬಳಸಿಕೊಳ್ಳಬಹುದು. ಇದರಲ್ಲಿ ಹಣವನ್ನು ಕಳಿಸುವ ಬಗ್ಗೆ ಮಾಹಿತಿಯನ್ನು ತಂತಿ ಸಂದೇಶದ ಮೂಲಕ ಕಳಿಸಲಾಗುತ್ತದೆ.

ಸುರಕ್ಷಿತ ಕಪಾಟುಗಳು (ಲಾಕರ್‌ಗಳು)

ಬ್ಯಾಂಕುಗಳು ಇನ್ನೂ ಹಲವಾರು ಸೇವೆಗಳನ್ನು ಗ್ರಾಹಕರಿಗೆ ನೀಡುತ್ತವೆ.

ಸುಧಾಕರ: ಬ್ಯಾಂಕುಗಳು ಸುರಕ್ಷಿತ ಕಪಾಟುಗಳನ್ನು ಒದಗಿಸುತ್ತವೆ. ಅಲ್ಲವೆ?

ಅಧಿಕಾರಿ: ಹೌದು. ಬ್ಯಾಂಕುಗಳು ತಮ್ಮ ಬಳಿ ಇರುವ ಹಣವನ್ನು ಇಟ್ಟುಕೊಳ್ಳುವುದಕ್ಕೆ ಹಲವಾರು ಸುರಕ್ಷತಾ ಏರ್ಪಾಡುಗಳನ್ನು ಮಾಡಿವೆ. ಈ ಸುರಕ್ಷತೆಯ ಲಾಭ ಗ್ರಾಹಕರಿಗೂ ದೊರೆಯಲಿ ಎಂಬ ಉದ್ದೇಶದಿಂದ, ಇಂಥ ಸ್ಥಳಗಳಲ್ಲಿ ಕೆಲವು ಕಪಾಟುಗಳನ್ನು ಇಟ್ಟಿರುತ್ತವೆ. ಇವುಗಳನ್ನು ಗ್ರಾಹಕರಿಗೆ ಬಾಡಿಗೆಗೆ ನೀಡುತ್ತವೆ. ಗ್ರಾಹಕರು ಇದಕ್ಕೆ ಮೂರು ತಿಂಗಳಿಗೆ ಒಂದು ಸಲ ಅಥವಾ ವರ್ಷಕ್ಕೆ ಒಂದು ಸಲ ಬಾಡಿಗೆ ನೀಡಬೇಕು. ತಮ್ಮ ಈ ಕಪಾಟುಗಳಲ್ಲಿ ಗ್ರಾಹಕರು ಬೆಲೆ ಬಾಳುವ ವಸ್ತುಗಳನ್ನು ಇಟ್ಟುಕೊಳ್ಳಬಹುದು. ಬೆಳ್ಳಿ, ಬಂಗಾರ ಮುಖ್ಯ ಕಾಗದ ಪತ್ರಗಳು ಇಂತಹವುಗಳನ್ನು ಸಾಮಾನ್ಯವಾಗಿ ಗ್ರಾಹಕರು ಇಟ್ಟುಕೊಳ್ಳುತ್ತಾರೆ. ಮನೆಯಲ್ಲಿ ಕಳ್ಳತನವಾಗಬಹುದು. ಆದರೆ ಇಲ್ಲಿ ಈ ವಸ್ತುಗಳು ಸುರಕ್ಷಿತವಾಗಿರುತ್ತವೆ. ಅಕಸ್ಮಾತ್ತಾಗಿ ಅವು ಇಲ್ಲಿ ಕಳುವಾಯಿತೆನ್ನಿ ಅಥವಾ ಇನ್ನಾವುದೇ ರೀತಿಯಲ್ಲಿ ನಾಶಹೊಂದಿತೆನ್ನಿ. ಗ್ರಾಹಕರಿಗಾದ ಈ

ನಷ್ಟವನ್ನು ಬ್ಯಾಂಕು ತುಂಬಿಕೊಡುತ್ತದೆ. ಈ ಕಪಾಟುಗಳ ಸೌಲಭ್ಯ ಪಟ್ಟಣ ಪ್ರದೇಶಗಳಲ್ಲಿ ಮಾತ್ರ ದೊರೆಯುತ್ತದೆ.

ನಾಮ ನಿರ್ದೇಶನ

ರಂಗಪ್ಪ: ಸ್ವಾಮಿ, ನಿಮ್ಮ ಬ್ಯಾಂಕುಗಳಲ್ಲಿ ಜನರು ಹಣ ಇಡುತ್ತಾರಲ್ಲ. ಒಂದು ವೇಳೆ ಅವರು ಸತ್ತುಹೋದರೆ ಅವರ ಹಣ ಯಾರಿಗೆ ಸಿಗುತ್ತದೆ?

ಅಧಿಕಾರಿ: ಗ್ರಾಹಕರು ತಾವು ಬದುಕಿರುವಾಗ ತಮ್ಮ ಹಣಕ್ಕೆ ವಾರಸುದಾರರನ್ನು ಸೂಚಿಸಬಹುದು. ಇದಕ್ಕೆ ನಾಮ ನಿರ್ದೇಶನ ಅಥವಾ ನಾಮಿನೇಶನ್ ಎನ್ನುತ್ತಾರೆ. ಇದೊಂದು ಉಚಿತ ಸೇವೆ. ಇದನ್ನು ಬ್ಯಾಂಕಿಗೆ ಮುದ್ರಿತ ನಮೂನೆಯಲ್ಲಿ ನೀಡಬೇಕು. ಇಂತಹ ನಾಮ ನಿರ್ದೇಶನ ಮಾಡದೇ ಇದ್ದ ಸಂದರ್ಭದಲ್ಲಿ ಬ್ಯಾಂಕು ಗ್ರಾಹಕರ ಕಾನೂನು ಬದ್ಧ ವಾರಸುದಾರರಿಗೆ ಹಣವನ್ನು ನೀಡುತ್ತದೆ. ಇದಕ್ಕಾಗಿ ಗ್ರಾಹಕರ ವಾರಸುದಾರರು ನ್ಯಾಯಾಲಯದಿಂದ ಅಗತ್ಯವಾದ ಪ್ರಮಾಣಪತ್ರಗಳನ್ನೂ ತರಬೇಕಾಗುತ್ತದೆ.

ಕರ್ನಾಟಕದ ಬ್ಯಾಂಕುಗಳು

ಮಾಸ್ತರರು: ಸ್ವಾಮಿ, ಕರ್ನಾಟಕದಲ್ಲಿ ಎಷ್ಟು ಬ್ಯಾಂಕುಗಳಿವೆ? ಕರ್ನಾಟಕದಲ್ಲೇ ಹುಟ್ಟಿದ ಬ್ಯಾಂಕುಗಳು ಯಾವುವು?

ಅಧಿಕಾರಿ: ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕರ್ನಾಟಕದ ಸಾಧನೆ ಎದ್ದು ಕಾಣುವಂತಹುದು. ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯ ಬ್ಯಾಂಕುಗಳು ದೇಶದ ಎಲ್ಲ ಕಡೆ ಹೆಸರು ಮಾಡಿವೆ. ಈ ಜಿಲ್ಲೆಯಲ್ಲಿ ಹೆಜ್ಜೆ ಹೆಜ್ಜೆಗೂ ಬ್ಯಾಂಕು ಶಾಖೆಗಳಿವೆ. ಭಾರತದ ಬೇರೆ ಯಾವ ಜಿಲ್ಲೆಯಲ್ಲೂ ಇಷ್ಟು ಬ್ಯಾಂಕು ಶಾಖೆಗಳು ಇಲ್ಲ. ಈ ಜಿಲ್ಲೆಯಲ್ಲಿ ಹುಟ್ಟಿದ ಕೆನರಾ ಬ್ಯಾಂಕು, ವಿಜಯಾ ಬ್ಯಾಂಕು, ಕಾರ್ಪೊರೇಷನ್ ಬ್ಯಾಂಕು ಮತ್ತು ಸಿಂಡಿಕೇಟ್ ಬ್ಯಾಂಕುಗಳು ಈಗ ಭಾರತ ಸರ್ಕಾರದ ವಶದಲ್ಲಿವೆ. ಇಲ್ಲಿನ ಮತ್ತೊಂದು ಬ್ಯಾಂಕು ಆದ ಕರ್ಣಾಟಕ ಬ್ಯಾಂಕು ಕೂಡ ಒಂದು ದೊಡ್ಡ ಖಾಸಗಿ ಬ್ಯಾಂಕ್ ಆಗಿದೆ. ಮೈಸೂರು ಸಂಸ್ಥಾನದ ದಿವಾನರಾಗಿದ್ದ ಭಾರತರತ್ನ ಸರ್. ಎಂ. ವಿಶ್ವೇಶ್ವರಯ್ಯ ಅವರು ಸ್ಥಾಪಿಸಿದ ಮೈಸೂರು ಬ್ಯಾಂಕ್ ಈಗ 'ಸ್ಟೇಟ್ ಬ್ಯಾಂಕ್ ಆಫ್ ಮೈಸೂರು' ಆಗಿದೆ. ಬೆಂಗಳೂರಿನಲ್ಲಿರುವ 'ದಿ ವೈಶ್ಯ ಬ್ಯಾಂಕ್ ಲಿಮಿಟೆಡ್' ಈಗ ದೇಶದ ಅತಿದೊಡ್ಡ ಖಾಸಗಿ ಬ್ಯಾಂಕ್ ಆಗಿದೆ.

ಅತಿ ದೊಡ್ಡ ಬ್ಯಾಂಕು

ಭಾರತದ ಬ್ಯಾಂಕುಗಳಲ್ಲಿ ಅತಿ ದೊಡ್ಡ ಬ್ಯಾಂಕು ಎಂದರೆ ಭಾರತೀಯ ಸ್ಟೇಟ್ ಬ್ಯಾಂಕು. ಇದರ ಒಟ್ಟು ಶಾಖೆಗಳ ಸಂಖ್ಯೆ ಈಗ ಎಂಟೂವರೆ ಸಾವಿರಕ್ಕೂ ಹೆಚ್ಚು. ಇದು ಜಗತ್ತಿನಲ್ಲೇ ಅತಿ ಹೆಚ್ಚು ಶಾಖೆಗಳನ್ನು ಹೊಂದಿರುವ ಬ್ಯಾಂಕು ಎಂದು ಪ್ರಸಿದ್ಧಿ ಪಡೆದಿದೆ. ಇದಲ್ಲದೆ, ಈ ಬ್ಯಾಂಕಿನ ಸಹವರ್ತಿ ಬ್ಯಾಂಕುಗಳೂ ಕೂಡ ಇದರ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿವೆ. ಹಾಗಾಗಿ ಈ ಸ್ಟೇಟ್ ಬ್ಯಾಂಕ್ ಗುಂಪಿನ ಒಟ್ಟು ಶಾಖೆಗಳ ಸಂಖ್ಯೆ ಹನ್ನೆರಡು ಸಾವಿರಕ್ಕೂ ಹೆಚ್ಚು. ಭಾರತೀಯ ಸ್ಟೇಟ್ ಬ್ಯಾಂಕು ವಿದೇಶಗಳಲ್ಲೂ ಕೂಡಾ ಶಾಖೆಗಳನ್ನು ಹೊಂದಿದೆ. ಅಲ್ಲದೆ ಈ ಬ್ಯಾಂಕು ಹಲವಾರು ಉಪಸಂಸ್ಥೆಗಳನ್ನು ಭಾರತದಲ್ಲೂ ವಿದೇಶಗಳಲ್ಲೂ ಹೊಂದಿದೆ.

ಭಾರತೀಯ ರಿಸರ್ವ್ ಬ್ಯಾಂಕು

ದಿವಾಕರ: ಸ್ವಾಮಿ, ನಮ್ಮ ಹತ್ತಿರ ಇರುವ ರೂಪಾಯಿ ನೋಟುಗಳ ಮೇಲೆ "ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ' ಎಂದು ಬರೆದಿರುತ್ತದೆ. ಈ ಬ್ಯಾಂಕಿನ ಶಾಖೆಗಳನ್ನು ನಾನು ಮೈಸೂರಿನಲ್ಲಿ ನೋಡಲೇ ಇಲ್ಲವಲ್ಲ?

ಅಧಿಕಾರಿ: ರಿಸರ್ವ್ ಬ್ಯಾಂಕಿಗೆ ರಾಜ್ಯದ ರಾಜಧಾನಿಗಳಲ್ಲಿ ಮತ್ತು ದೇಶದ ದೊಡ್ಡ ವ್ಯಾಪಾರ ಕೇಂದ್ರಗಳಲ್ಲಿ ಮಾತ್ರ ಶಾಖೆಗಳಿರುತ್ತವೆ. ಈ ವಿಷಯವನ್ನು ನಾನು ಸ್ವಲ್ಪ ವಿವರವಾಗಿ ಹೇಳುತ್ತೇನೆ.

ಜಗತ್ತಿನ ಎಲ್ಲ ದೇಶಗಳಲ್ಲೂ ಒಂದೊಂದು ಕೇಂದ್ರ ಬ್ಯಾಂಕು ಇರುತ್ತದೆ. ರಿಸರ್ವ್ ಬ್ಯಾಂಕ್ ಕೂಡ ಹೀಗೆಯೇ. ಇದು ಭಾರತ ದೇಶದ ಕೇಂದ್ರ ಬ್ಯಾಂಕು. ಇದು ಸುಮಾರು ಐವತ್ತೆಂಟು ವರ್ಷಗಳ ಹಿಂದೆ ಸ್ಥಾಪನೆಗೊಂಡಿತು. ಇದರ ಮುಖ್ಯ ಕೆಲಸವೆಂದರೆ ಹೊಸ ನಾಣ್ಯ, ನೋಟುಗಳನ್ನು ಚಲಾವಣೆಗೆ ತರುವುದು. ಸರ್ಕಾರದ ಬ್ಯಾಂಕಿಂಗ್ ವ್ಯವಹಾರಗಳನ್ನು ನೋಡಿಕೊಳ್ಳುವುದು, ದೇಶದ ಬ್ಯಾಂಕುಗಳ ಚಟುವಟಿಕೆಗಳ ಮೇಲೆ ನಿಗಾ ಇಡುವುದು ಮತ್ತು ಆಗಾಗ ತನಿಖೆ ಮಾಡುವುದು. ಸರ್ಕಾರಗಳು ಸಾರ್ವಜನಿಕರಿಂದ ಸಾಲ ಎತ್ತುವಾಗ ಅದಕ್ಕೆ ಸಂಬಂಧಪಟ್ಟ ಹಣಕಾಸಿನ ವ್ಯವಹಾರಗಳನ್ನು ನೋಡಿಕೊಳ್ಳುವುದು ಮುಂತಾದವು.

ಹೊಸ ನೋಟು, ನಾಣ್ಯಗಳನ್ನು ಭಾರತ ಸರ್ಕಾರ ತನ್ನ ಟಂಕಸಾಲೆ ಮತ್ತು ಮುದ್ರಣಾಲಯಗಳಲ್ಲಿ ಅಚ್ಚು ಮಾಡುತ್ತದೆ. ಭಾರತೀಯ ರಿಸರ್ವ್ ಬ್ಯಾಂಕು ಇದನ್ನು ಉಳಿದ

ಬ್ಯಾಂಕುಗಳಿಗೆ ವಿತರಿಸುತ್ತದೆ. ಬ್ಯಾಂಕುಗಳು ಇದನ್ನು ಚಲಾವಣೆಗೆ ತರುತ್ತವೆ. ಹಾಗೆಯೇ ಜನರಿಂದ ಹಳೆಯ, ಹರಿದ, ಮಾಸಿದ ನೋಟುಗಳನ್ನು ಮತ್ತು ಸವಕಲಾದ ನಾಣ್ಯಗಳನ್ನು ಸಂಗ್ರಹಿಸಿ ರಿಸರ್ವ್ ಬ್ಯಾಂಕಿಗೆ ಕಳಿಸುತ್ತವೆ.

ಬ್ಯಾಂಕುಗಳ ನಿಯಂತ್ರಣ

ರಿಸರ್ವ್ ಬ್ಯಾಂಕು ಇನ್ನೂ ಒಂದು ಮುಖ್ಯ ಕೆಲಸ ಮಾಡುತ್ತದೆ. ಬ್ಯಾಂಕುಗಳ ಚಟುವಟಿಕೆಗಳನ್ನೂ, ಕಾರ್ಯಕ್ರಮಗಳನ್ನೂ ಇದು ಗಮನಿಸುತ್ತಿರುತ್ತದೆ. ರಿಸರ್ವ್ ಬ್ಯಾಂಕನ್ನು ಬ್ಯಾಂಕುಗಳ ಕುಟುಂಬದ ಯಜಮಾನ ಎನ್ನಬಹುದು. ಕುಟುಂಬದ ಯಜಮಾನನು ಕುಟುಂಬದ ಉಳಿದ ಸದಸ್ಯರ ಯೋಗಕ್ಷೇಮ ಗಮನಿಸುವ ಹಾಗೆ ಇದೂ ಮಾಡುತ್ತದೆ. ಬ್ಯಾಂಕುಗಳು ತಮ್ಮತಮ್ಮಲ್ಲೇ ಕೆಟ್ಟ ಸ್ಪರ್ಧೆಗೆ ತೊಡಗದ ಹಾಗೆ ನೋಡಿಕೊಳ್ಳುವುದು, ಬ್ಯಾಂಕುಗಳ ಬಡ್ಡಿ ದರಗಳನ್ನು ನಿರ್ಧರಿಸುವುದು, ಗ್ರಾಹಕರಿಗೆ ಬ್ಯಾಂಕುಗಳು ಉತ್ತಮ ಸೇವೆ ನೀಡುವಂತೆ ನೋಡಿಕೊಳ್ಳುವುದು - ಈ ಕೆಲಸಗಳನ್ನು ರಿಸರ್ವ್ ಬ್ಯಾಂಕು ಮಾಡುತ್ತದೆ. ಇದು ಸಾರ್ವಜನಿಕರಿಂದ ಠೇವಣಿಗಳನ್ನು ಸ್ವೀಕರಿಸುವುದಿಲ್ಲ. ಸಾರ್ವಜನಿಕರಿಗೆ ನೇರವಾಗಿ ಸಾಲ ನೀಡುವುದೂ ಇಲ್ಲ.

ಇದಲ್ಲದೆ, ರಿಸರ್ವ್ ಬ್ಯಾಂಕು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಹಣಕಾಸಿನ ವಿಷಯದಲ್ಲಿ ಸಲಹೆ ನೀಡುವ ಕೆಲಸ ಮಾಡುತ್ತದೆ. ಯಾವ ಕ್ಷೇತ್ರಕ್ಕೆ ಅಥವಾ ಯಾವ ಉದ್ಯಮಕ್ಕೆ ಬ್ಯಾಂಕುಗಳು ಎಷ್ಟು ನೆರವು ನೀಡಬೇಕು ಎಂಬುದನ್ನು ರಿಸರ್ವ್ ಬ್ಯಾಂಕು ಆಗಾಗ ಸೂಚಿಸುತ್ತದೆ.

ಅಭಿವೃದ್ಧಿ ಬ್ಯಾಂಕುಗಳು

ಸುಧಾಕರ: ಸ್ವಾಮಿ, ಜನಸಾಮಾನ್ಯರ ಗಮನಕ್ಕೂ ಬಾರದ ಬ್ಯಾಂಕುಗಳೂ ಇವೆಯೇ?

ಅಧಿಕಾರಿ: ಇವೆ. ಇವುಗಳು ಬ್ಯಾಂಕುಗಳ ಕೆಲವು ಕೆಲಸಗಳನ್ನು ಮಾತ್ರ ಮಾಡುತ್ತವೆ. ಆದ್ದರಿಂದ ಇವುಗಳನ್ನು ವಾಣಿಜ್ಯ ಬ್ಯಾಂಕುಗಳೆಂದು ಕರೆಯುವುದಿಲ್ಲ. ಇವು ಅಭಿವೃದ್ಧಿಗೆ ನೆರವು ನೀಡುವ ಸಂಸ್ಥೆಗಳು. ಆದ್ದರಿಂದ ಇವುಗಳನ್ನು "ಅಭಿವೃದ್ಧಿ ಬ್ಯಾಂಕು"ಗಳೆಂದು ಕರೆಯುತ್ತಾರೆ. ಅವುಗಳಲ್ಲಿ ಕೆಲವು ಸಂಸ್ಥೆಗಳು ಕೈಗಾರಿಕೆಗಳಿಗೆ ಬೇಕಾದ ಮಧ್ಯಮ ಮತ್ತು ದೀರ್ಘ ಅವಧಿಯ ಹಣಕಾಸು ನೆರವನ್ನು ಒದಗಿಸುತ್ತವೆ. ದೊಡ್ಡ ಕೈಗಾರಿಕೆಗಳಿಗೆ ಅಗತ್ಯವಾದ ಸಾವಿರಾರು ಕೋಟಿ ರೂಪಾಯಿಗಳ ನೆರವನ್ನು ವಾಣಿಜ್ಯ ಬ್ಯಾಂಕುಗಳು ಒದಗಿಸುವುದು ಸಾಧ್ಯವಿಲ್ಲ. ಇಂಥ ದೊಡ್ಡ ಪ್ರಮಾಣದ ನೆರವನ್ನು ಒದಗಿಸಲೆಂದೇ ಭಾರತ ಸರ್ಕಾರ ಈ ಅಭಿವೃದ್ಧಿ ಬ್ಯಾಂಕುಗಳನ್ನು ಸ್ಥಾಪಿಸಿದೆ.

ಇನ್ನು ಕೆಲವು ಸಂಸ್ಥೆಗಳು ಬ್ಯಾಂಕುಗಳಿಗೆ ಅಗತ್ಯವಾದ ನೆರವನ್ನು ಒದಗಿಸುತ್ತಿವೆ. ಜನರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಬೇಕಾದ ಹಣಕಾಸಿನ ನೆರವನ್ನು ಒದಗಿಸುತ್ತದೆ. ಕೃಷಿ ಕೆಲಸಗಳಿಗೆ ನೆರವನ್ನು ಒದಗಿಸುತ್ತದೆ. ಆದರೆ ಈ ನೆರವನ್ನು ವಾಣಿಜ್ಯ ಬ್ಯಾಂಕು ಮತ್ತು ಗ್ರಾಮೀಣ ಸಹಕಾರಿ ಬ್ಯಾಂಕುಗಳ ಮೂಲಕ ನೀಡುತ್ತದೆ. ಭಾರತೀಯ ರಫ್ತು-ಆಮದು ಬ್ಯಾಂಕು ಎಂಬ ಒಂದು ಸಂಸ್ಥೆ ಇದೆ. ರಫ್ತು ಎಂದರೆ ದೇಶದಲ್ಲಿ ತಯಾರಾದ ವಸ್ತುಗಳನ್ನು ಬೇರೆ ದೇಶಗಳಿಗೆ ಮಾರುವುದು. ಆಮದು ಎಂದರೆ ನಮಗೆ ಬೇಕಾದ ವಸ್ತುಗಳನ್ನು ಬೇರೆ ದೇಶಗಳಿಂದ ಕೊಳ್ಳುವುದು. ಈ ವ್ಯವಹಾರದಲ್ಲಿ ತೊಡಗಿರುವ ಕೆಲವು ಸಂಸ್ಥೆಗಳಿವೆ. ಇವುಗಳಿಗೆ ಬೇಕಾದ ಹಣಕಾಸಿನ ನೆರವನ್ನು ವಾಣಿಜ್ಯ ಬ್ಯಾಂಕುಗಳು ಒದಗಿಸುತ್ತವೆ. ವಾಣಿಜ್ಯ ಬ್ಯಾಂಕುಗಳಿಗೆ ಈ ಕೆಲಸಕ್ಕೆ ಬೇಕಾದ ಹಣವನ್ನು ಭಾರತೀಯ ರಫ್ತು-ಆಮದು ಬ್ಯಾಂಕು ಒದಗಿಸುತ್ತದೆ.

ವಿದೇಶೀ ಬ್ಯಾಂಕುಗಳು

ದಿವಾಕರ: ಸ್ವಾಮಿ, ಭಾರತೀಯ ಸ್ಟೇಟ್ ಬ್ಯಾಂಕು ವಿದೇಶಗಳಲ್ಲಿ ಕೂಡಾ ಶಾಖೆಗಳನ್ನು ಹೊಂದಿದೆ ಎಂದು ಹೇಳಿದಿರಿ. ವಿದೇಶಗಳ ಬ್ಯಾಂಕುಗಳು ಕೂಡಾ ಭಾರತದಲ್ಲಿ ತಮ್ಮ ಶಾಖೆಗಳನ್ನು ತೆರೆದಿವೆಯೋ ಹೇಗೆ?

ಅಧಿಕಾರಿ: ತೆರೆದಿವೆ. ಜಗತ್ತಿನ ಎಲ್ಲ ಮುಖ್ಯ ದೇಶಗಳ ಬ್ಯಾಂಕುಗಳೂ ಭಾರತದಲ್ಲಿ ತಮ್ಮ ಶಾಖೆಗಳನ್ನು ತೆರೆದಿವೆ. ಹೀಗೆ ವಿದೇಶೀ ಬ್ಯಾಂಕುಗಳು ಭಾರತದಲ್ಲಿ ಶಾಖೆ ತೆರೆಯಲು ರಿಸರ್ವ್ ಬ್ಯಾಂಕಿನ ಮತ್ತು ಕೇಂದ್ರ ಸರ್ಕಾರದ ಅನುಮತಿ ಅಗತ್ಯ. ಈಗ ಭಾರತದಲ್ಲಿ ಇಪ್ಪತ್ತಕ್ಕೂ ಹೆಚ್ಚು ವಿದೇಶೀ ಬ್ಯಾಂಕುಗಳು ಕೆಲಸ ಮಾಡುತ್ತಿವೆ. ಇವು ಹೆಚ್ಚಾಗಿ ಆಮದು-ರಫ್ತು ಉದ್ಯಮಕ್ಕೆ ನೆರವು ನೀಡುವುದರಲ್ಲಿ ತೊಡಗಿವೆ. ಹೀಗಾಗಿ ಈ ಬ್ಯಾಂಕುಗಳ ಶಾಖೆಗಳು ಪ್ರಮುಖ ಬಂದರು ಪಟ್ಟಣಗಳಲ್ಲಿ ಇರುತ್ತವೆ. ಈಗ ಭಾರತದಲ್ಲಿ ಸುಮಾರು ನೂರಾನಲವತ್ತು ವಿದೇಶೀ ಬ್ಯಾಂಕು ಶಾಖೆಗಳಿವೆ.

ಕರ್ನಾಟಕದಲ್ಲಿ ಎರಡು ವಿದೇಶೀ ಬ್ಯಾಂಕು ಶಾಖೆಗಳಿವೆ. ಅವೆರಡೂ ಬೆಂಗಳೂರಿನಲ್ಲಿವೆ. ಒಂದು, ಎ.ಎನ್.ಝಡ್. ಗ್ರಿಂಡ್‌ಲೇಸ್ ಬ್ಯಾಂಕು, ಮತ್ತೊಂದು ಹಾಂಕಾಂಗ್ ಬ್ಯಾಂಕು.

ಯಾರು ಬೇಕಾದರೂ ಖಾತೆ ತೆರೆಯಬಹುದೇ ?

ರಂಗಪ್ಪ: ಸ್ವಾಮಿ ನಾನು ಹೀಗೆ ಕೇಳುತ್ತೇನೆ ಎಂದು ತಪ್ಪು ತಿಳಿಯಬೇಡಿ. ಬ್ಯಾಂಕುಗಳಲ್ಲಿ ಯಾರು ಬೇಕಾದರೂ ಖಾತೆ ತೆಗೆಯಬಹುದೋ? ಯಾರಿಗೆ ಬೇಕಾದರೂ ಸಾಲ ಕೊಡುತ್ತಾರೋ ?

ಅಧಿಕಾರಿ : ನೀನು ಕೇಳಿರುವುದು ತುಂಬ ಮುಖ್ಯವಾದ ಪ್ರಶ್ನೆ. ಬ್ಯಾಂಕುಗಳಲ್ಲಿ ಯಾರು ಬೇಕಾದರೂ ಖಾತೆ ತೆರೆಯಬಹುದು. ಹದಿನೆಂಟು ವರ್ಷಕ್ಕಿಂತ ಕಡಿಮೆ ವಯಸ್ಸಾಗಿರುವವರು, ಮಾನಸಿಕ ಖಾಯಿಲೆಗಳಿಂದ ನರಳುತ್ತಿರುವವರು, ದಿವಾಳಿಯಾಗಿರುವವರು-ಇವರು ಮಾತ್ರ ಖಾತೆ ತೆರೆಯಲು ಬರುವುದಿಲ್ಲ. ಬ್ಯಾಂಕುಗಳಲ್ಲಿ ಖಾತೆಯನ್ನು ತೆರೆಯಬಯಸುವವರು ವಿದ್ಯಾವಂತರಾಗಿರಬೇಕು ಎಂಬ ನಿಯಮವೇನೂ ಇಲ್ಲ. ಓದಲು, ಬರೆಯಲು ಬಾರದವರೂ ಖಾತೆಯನ್ನು ತೆರೆಯಬಹುದು. ಯಾರಿಗೆ ತಮ್ಮ ಹೆಸರನ್ನು ಬರೆಯಲು ಬರುವುದಿಲ್ಲವೋ, ಅವರ ಎಡಗೈ ಹೆಬ್ಬೆಟ್ಟಿನ ಗುರುತನ್ನು ಬ್ಯಾಂಕು ತನ್ನ ದಾಖಲೆಗಳಲ್ಲಿ ಇಟ್ಟುಕೊಳ್ಳುತ್ತದೆ. ಇಂಥವರು ಖಾತೆ ತೆರೆಯುವಾಗ ಬ್ಯಾಂಕಿಗೆ ತಮ್ಮ ಭಾವಚಿತ್ರವನ್ನು ಕೊಡಬೇಕು. ಮತ್ತು ಖಾತೆಯಿಂದ ಹಣ ಹಿಂದಕ್ಕೆ ಪಡೆಯುವಾಗ ಬ್ಯಾಂಕಿಗೆ ಖುದ್ದಾಗಿ ಬರಬೇಕಾಗುತ್ತದೆ. ಹೊಸದಾಗಿ ಇತರೆ ಎಲ್ಲ ಗ್ರಾಹಕರೂ ತಮ್ಮ ಭಾವಚಿತ್ರವನ್ನು ಬ್ಯಾಂಕುಗಳಿಗೆ ನೀಡುವುದು ಅಗತ್ಯವಾಗಿದೆ ಎಂಬುದನ್ನು ನಿಯಮ ಮಾಡಿದ್ದಾರೆ.

ವ್ಯಕ್ತಿಗಳೇ ಅಲ್ಲದೆ, ಹಿಂದೂ ಅವಿಭಕ್ತ ಕುಟುಂಬಗಳು, ಪಾಲುದಾರಿಕೆ ಸಂಸ್ಥೆಗಳು, ಕಂಪನಿಗಳು, ಶಾಲೆಗಳು, ನ್ಯಾಸಗಳೂ ಸಹ ತಮ್ಮ ಬ್ಯಾಂಕ್ ಖಾತೆಗಳನ್ನು ತೆರೆಯಬಹುದು. ಬ್ಯಾಂಕಿನಲ್ಲಿ ಖಾತೆ ತೆರೆಯಬಯಸುವವರನ್ನು, ಈ ಮೊದಲೇ ಬ್ಯಾಂಕಿನಲ್ಲಿ ಖಾತೆ ಹೊಂದಿರುವವರು ಬ್ಯಾಂಕಿಗೆ ಪರಿಚಯಿಸುವುದು ಅಗತ್ಯ. ಅಂತಹವರು ತಮ್ಮ ಸಹಿ ಹಾಕುವುದರ ಜೊತೆಗೆ ತಮ್ಮ ಖಾತೆಯ ಸಂಖ್ಯೆಯನ್ನೂ ಬರೆಯಬೇಕು.

ಬ್ಯಾಂಕುಗಳಲ್ಲಿ ಉಳಿತಾಯ ಖಾತೆಗಳನ್ನು ಐದು ರೂಪಾಯಿಯಿಂದಲೂ ಆರಂಭಿಸಬಹುದು. ಆದರೆ ಚೆಕ್ಕು ಪುಸ್ತಕದ ಸೌಲಭ್ಯ ಬೇಕಾದವರು ತಮ್ಮ ಖಾತೆಯಲ್ಲಿ ಎರಡು ನೂರಾ ಐವತ್ತು ರೂಪಾಯಿಗಳ ಶಿಲ್ಕು ಹೊಂದಿರಬೇಕು. ಚಾಲ್ತಿ ಖಾತೆಯನ್ನು ಕನಿಷ್ಟ ಒಂದು ನೂರು ರೂಪಾಯಿಗಳಿಂದ ಆರಂಭಿಸಬಹುದು. ಈ ಖಾತೆಯು ಪ್ರತಿದಿನ ಬ್ಯಾಂಕಿನಲ್ಲಿ ಹಲವಾರು ಸಲ ಹಣ ಜಮಾ ಮಾಡುವ, ಹಣ ಹಿಂಪಡೆಯುವ ಜನರಿಗೆ ಅನುಕೂಲ. ಈ ಖಾತೆಯಲ್ಲಿ ಚೆಕ್ಕು ಪುಸ್ತಕ ಪಡೆಯಲು ಕನಿಷ್ಟ ಐದು ನೂರು ರೂಪಾಯಿಗಳ ಶಿಲ್ಕು ಉಳಿಸಿಕೊಂಡು ಬರಬೇಕು. ಗುತ್ತಿಗೆದಾರರು, ಅಂಗಡಿ ಇಟ್ಟುಕೊಂಡವರು ಇಂತಹವರಿಗೆ ಈ ಖಾತೆ ಅನುಕೂಲಕರ.

ಸಾಲ ಕೊಡಲು ನಿಯಮಗಳು

ಬ್ಯಾಂಕುಗಳು ಸಾಲ ಕೊಡುವುದಿಲ್ಲ. ಬ್ಯಾಂಕಿನ ಸಾಲ ಸೌಲಭ್ಯ ಪಡೆಯಬೇಕಾದವರು ಮೊದಲು ಆ ಬ್ಯಾಂಕಿನ ಗ್ರಾಹಕರಾಗಿರಬೇಕು. ಬ್ಯಾಂಕಿನೊಂದಿಗೆ ಅವರ

ವ್ಯವಹಾರ ಚೆನ್ನಾಗಿರಬೇಕು. ತನಗೆ ಸಾಲ ಏಕೆ ಬೇಕು. ಎಷ್ಟು ಸಾಲ ಬೇಕು, ಸಾಲದ ಹಣವನ್ನು ಹೇಗೆ ಬಳಸಲಾಗುವುದು, ಸಾಲವನ್ನು ಯಾವಾಗ ಹಿಂದಿರುಗಿಸಲಾಗುವುದು - ಈ ಕುರಿತು ಬ್ಯಾಂಕಿಗೆ ಅಗತ್ಯವಾದ ಭರವಸೆ ನೀಡಬೇಕು. ಯಾವ ಚಟುವಟಿಕೆಯಿಂದ ಹೆಚ್ಚು ಲಾಭ ಬರುವುದಿಲ್ಲವೋ ಅಂತಹ ಚಟುವಟಿಕೆಗಳಿಗೆ ಬ್ಯಾಂಕು ಸಾಲ ನೀಡುವುದಿಲ್ಲ. ಮತ್ತು ಯಾವ ಚಟುವಟಿಕೆಯಿಂದ ವೃಥಾ ಹಣ ಖರ್ಚಾಗುವುದೋ ಅಂಥಾ ಚಟುವಟಿಕೆಗೂ ಬ್ಯಾಂಕುಗಳು ಸಾಲ ನೀಡುವುದಿಲ್ಲ. ಹಲವು ಸಂದರ್ಭಗಳಲ್ಲಿ ಬ್ಯಾಂಕು ಕೊಡುವ ಸಾಲಕ್ಕೆ ಅಗತ್ಯವಾದ ಖಾತರಿಯನ್ನು ಗ್ರಾಹಕರು ಒದಗಿಸಬೇಕಾಗುತ್ತದೆ.

ಸರ್ಕಾರವು ಬಡವರಿಗೆ ಮತ್ತು ದುರ್ಬಲ ವರ್ಗಗಳ ಜನರಿಗೆ ಬ್ಯಾಂಕುಗಳ ನೆರವು ನೀಡಲು ಹಲವಾರು ಯೋಜನೆಗಳನ್ನು ಹಾಕಿಕೊಂಡಿದೆ.

ಕಡಿಮೆ ಬಡ್ಡಿ ದರದ ಸಾಲ

ಇವುಗಳಲ್ಲಿ ಮೊದಲಿನದು ಭಿನ್ನಕ ಬಡ್ಡಿದರ ಯೋಜನೆ. ಈ ಯೋಜನೆಯಲ್ಲಿ ದುರ್ಬಲ ವರ್ಗದ ಜನರಿಗೆ ಬ್ಯಾಂಕುಗಳು ತೀರಾ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ನೀಡುತ್ತವೆ. ಈಗ ಈ ಸಾಲಗಳಿಗೆ ಬ್ಯಾಂಕುಗಳು ಪ್ರತಿ ನೂರು ರೂಪಾಯಿಗೆ ಒಂದು ವರ್ಷಕ್ಕೆ ನಾಲ್ಕು ರೂಪಾಯಿ ಬಡ್ಡಿಯನ್ನು ಮಾತ್ರ ವಿಧಿಸುತ್ತಿವೆ. ಸಾಲ ಪಡೆಯುವವರು ಬ್ಯಾಂಕಿಗೆ ಯಾವುದೇ ಖಾತರಿಯನ್ನು ನೀಡಬೇಕಾಗಿಲ್ಲ. ವಿಧವೆಯರು, ದುರ್ಬಲ ವರ್ಗದ ಜನರು, ಕ್ಷಾಮ-ಪ್ರವಾಹ ಮುಂತಾದವುಗಳಿಂದ ನೊಂದವರು-ಇಂತಹ ಜನರಿಗೆ ಈ ಸಾಲದ ನೆರವು ದೊರೆಯುತ್ತದೆ.

ಇನ್ನೊಂದು ಆದ್ಯತಾ ವಲಯಕ್ಕೆ ನೆರವು. ಕೇಂದ್ರ ಸರ್ಕಾರವು ಆಗಾಗ ಯಾವ ವಲಯಕ್ಕೆ ಹೆಚ್ಚು ಬ್ಯಾಂಕ್ ನೆರವು ಅಗತ್ಯ ಎಂದು ಘೋಷಿಸುತ್ತದೆ. ಈ ವಲಯಕ್ಕೆ ಕೊಡುವ ಸಾಲಕ್ಕೆ ಬ್ಯಾಂಕುಗಳು ಪ್ರತಿ ನೂರು ರೂಪಾಯಿಗೆ ಒಂದು ವರ್ಷಕ್ಕೆ ಹತ್ತು ರೂಪಾಯಿ ಬಡ್ಡಿ ವಿಧಿಸುತ್ತವೆ. ಬೇಸಾಯ, ಸಣ್ಣ ಕೈಗಾರಿಕೆಗಳು, ಆಟೋರಿಕ್ಷ, ವ್ಯಾನು, ಲಾರಿ ಮುಂತಾದ ಸಾರಿಗೆ ವಾಹನಗಳು, ಚಿಲ್ಲರೆ ಮತ್ತು ಸಣ್ಣ ವ್ಯವಹಾರಗಳು, ಸ್ವಯಂ ಉದ್ಯೋಗಗಳು, ದುರ್ಬಲ ವರ್ಗಗಳಿಗೆ ವಸತಿ - ಇವೇ ಮುಂತಾದ ಕೈಗಾರಿಕೆಗಳಲ್ಲಿ ತೊಡಗಿರುವವರು ಈಗ ಆದ್ಯತಾ ವಲಯದಲ್ಲಿ ಬರುತ್ತಾರೆ. ಇವರೆಲ್ಲ ತಮ್ಮ ಹಣಕಾಸಿನ ನೆರವಿಗಾಗಿ ಬ್ಯಾಂಕುಗಳನ್ನು ಸಂಪರ್ಕಿಸಬಹುದು.

ಮಾಸ್ತರರು: ಸ್ವಾಮಿ, ತಮ್ಮಿಂದ ಇವತ್ತು ನಮಗೆಲ್ಲ ಬ್ಯಾಂಕುಗಳ ಬಗ್ಗೆ ತುಂಬ ಮಾಹಿತಿ ದೊರೆಯಿತು. ನಮ್ಮ ಪ್ರಶ್ನೆಗಳಿಗೆಲ್ಲ ಉತ್ತರ ಹೇಳಿ ಹೇಳಿ ತಮಗೆ ಬೇಸರವಾಯಿತೋ ಏನೋ?

ಅಧಿಕಾರಿ: ಇಲ್ಲ, ಮಾಸ್ತರರೇ. ನಮ್ಮ ಕೆಲಸವೇ ಬ್ಯಾಂಕುಗಳ ಗ್ರಾಹಕರಿಗೆ ಬ್ಯಾಂಕುಗಳ ಬಗ್ಗೆ ತಿಳಿಸುವುದು. ಜನರು ಬ್ಯಾಂಕುಗಳ ಬಗ್ಗೆ ಹೆಚ್ಚು ಹೆಚ್ಚು ತಿಳಿದುಕೊಂಡಷ್ಟೂ ಒಳ್ಳೆಯದು. ಇದರಿಂದ ಬ್ಯಾಂಕುಗಳ ವ್ಯವಹಾರ ಸುಲಭವಾಗುತ್ತದೆ. ಬ್ಯಾಂಕುಗಳ ಬಗ್ಗೆ ನೀವುಗಳು ಹೊಂದಿರುವ ಆಸಕ್ತಿಯನ್ನು ನೋಡಿ ನನಗೆ ತುಂಬ ಸಂತೋಷವಾಯಿತು. ನೀವೆಲ್ಲರೂ ಬ್ಯಾಂಕುಗಳು ಒದಗಿಸುವ ವಿವಿಧ ಸೇವೆಗಳನ್ನು ಉಪಯುಕ್ತವಾಗಿ ಬಳಸಿಕೊಳ್ಳುತ್ತೀರಿ ಎಂದು ನಂಬಿದ್ದೇನೆ. ಹೋಗಿ ಬರುತ್ತೇನೆ, ನಮಸ್ಕಾರ.

ಎಲ್ಲರೂ: ನಿಮ್ಮಿಂದ ತುಂಬ ಉಪಕಾರವಾಯಿತು ಸ್ವಾಮಿ, ಹೋಗಿ ಬನ್ನಿ, ನಮಸ್ಕಾರ.

☆ ☆ ☆

ಕನ್ನಡ ವಿಶ್ವವಿದ್ಯಾಲಯವು ನವಸಾಕ್ಷರರಿಗೆ ಮತ್ತು ಪ್ರಾಥಮಿಕ ಹಂತದಿಂದ ಪದವಿ ಮಟ್ಟದವರೆಗೆ ಉತ್ತಮ ಹಾಗೂ ಉಪಯುಕ್ತವಾದ ಪಠ್ಯಪುಸ್ತಕಗಳನ್ನು ನಿರ್ಮಾಣ ಮಾಡುವ ಸಲುವಾಗಿ 'ಪಠ್ಯಪುಸ್ತಕ ರಚನಾ ವಿಭಾಗ'ವನ್ನು ತೆರೆದಿದೆ. ಇದರ ಮೊದಲ ಪ್ರಯತ್ನವಾಗಿ ನವಸಾಕ್ಷರರಿಗಾಗಿ ಪಠ್ಯಪುಸ್ತಕ ರಚನೆ ಮಾಡಬೇಕೆಂದು ಚಿಂತಿಸುತ್ತಿರುವಾಗ ಬೆಂಬಲಕ್ಕೆ ಬಂದುದು ಲೋಕ ಶಿಕ್ಷಣ ಇಲಾಖೆ. ನವಸಾಕ್ಷರರಿಗಾಗಿ ಪುಸ್ತಕ ಬರೆಸುವ ತಮ್ಮಲ್ಲಿದ್ದ ಯೋಜನೆಯನ್ನು ಅವರು ನಮ್ಮ ವಿಶ್ವವಿದ್ಯಾಲಯಕ್ಕೆ ವಹಿಸಿಕೊಟ್ಟರು. ವಿಶ್ವವಿದ್ಯಾಲಯವು ಈ ಯೋಜನೆಯನ್ನು ಸಂತಸದಿಂದ ಸ್ವೀಕರಿಸಿ, ಕೂಡಲೇ ನಾಡಿನ ಪ್ರಖ್ಯಾತ ಲೇಖಕರನ್ನು, ಭಾಷಾತಜ್ಞರನ್ನು, ಶಿಕ್ಷಣತಜ್ಞರನ್ನು ಒಳಗೊಂಡಂತೆ ಸಲಹಾ ಸಮಿತಿಯನ್ನು ರಚಿಸಿ, ಅವರೆಲ್ಲರ ಅಭಿಪ್ರಾಯ, ಸಲಹೆ, ಸಹಕಾರಗಳನ್ನು ಕೇಳಿ ಕಾರ್ಯೋನ್ಮುಖವಾಯಿತು. ಪುಸ್ತಕಗಳ ವಸ್ತು, ಭಾಷೆ, ಮುದ್ರಣ ವಿನ್ಯಾಸ, ಚಿತ್ರಗಳ ಮಹತ್ವ, ಸಾಹಿತ್ಯಕ ಗುಣಮಟ್ಟ ಇತ್ಯಾದಿಗಳನ್ನು ಕುರಿತು ಸಮಿತಿಯು ಅನೇಕ ಸಲ ಚರ್ಚಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸೂಚಿಸಿತು.

ನವಸಾಕ್ಷರರಿಗಾಗಿ ಕನ್ನಡದಲ್ಲಿ ಹಾಗೂ ದೇಶದ ಇತರ ಭಾಷೆಗಳಲ್ಲಿ ಈಗಾಗಲೇ ಪ್ರಕಟವಾಗಿರುವ ಪುಸ್ತಕಗಳನ್ನೆಲ್ಲ ಒಟ್ಟುಗೂಡಿಸಿ, ಅವುಗಳ ಮಾದರಿ, ಮಾಹಿತಿಗಳನ್ನೆಲ್ಲ ಭಾಷಾತಜ್ಞರಿಂದ ಪರಿಶೀಲಿಸಲಾಯಿತು. ಜೊತೆಗೆ ಈ ಕ್ಷೇತ್ರದ ಅನುಭವಿ ಕ್ಷೇತ್ರಸಹಾಯಕರನ್ನು ನೇಮಿಸಿಕೊಂಡು ಅವರಿಗೆ ಕಮ್ಮಟಗಳನ್ನು ನಡೆಸಿ, ಪ್ರಶ್ನಾವಳಿ ತಯಾರಿಸಿಕೊಟ್ಟು, ಅವರನ್ನು ರಾಜ್ಯದಾದ್ಯಂತ ಆಯ್ದ ಜಿಲ್ಲೆ, ತಾಲೂಕುಗಳಿಗೆ ಕಳುಹಿಸಿ ಈ ಆಂದೋಲನದಲ್ಲಿ ಕಲಿತವರಿಂದ ಮತ್ತು ಕಲಿಯುತ್ತಿರುವವರಿಂದ ಅದರ ಗುಣದೋಷಗಳ ಬಗ್ಗೆ ಅಭಿಪ್ರಾಯ ಸಲಹೆಗಳನ್ನು ಸಂಗ್ರಹಿಸಿ, ಅನಂತರ ಅವುಗಳನ್ನೆಲ್ಲ ವಿಶ್ವವಿದ್ಯಾಲಯದ ಗಣಕಯಂತ್ರದಲ್ಲಿ ವಿಶ್ಲೇಷಿಸಲಾಯಿತು; ಮತ್ತೆ ಮತ್ತೆ ಕ್ಷೇತ್ರಗಳಿಗೆ ಹೋಗಿ, ಕ್ಷೇತ್ರ ಸಹಾಯಕರು ನೀಡಿದ್ದ ಮಾಹಿತಿಗಳನ್ನೆಲ್ಲ ಮರು ಪರಿಶೀಲನೆ ಮಾಡಿ, ನಂತರ ನವಸಾಕ್ಷರರ ಅಪೇಕ್ಷೆಗೆ ಅನುಗುಣವಾಗಿ ವಿಷಯದ ಆದ್ಯತೆಗಳನ್ನು ನಿರ್ಧರಿಸಿಕೊಂಡು ಪುಸ್ತಕ ರಚನೆಗೆ ತೊಡಗಲಾಯಿತು; ಪ್ರಖ್ಯಾತ ಲೇಖಕರು ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಜೊತೆ ಚರ್ಚಿಸಿ ತಮ್ಮ ಹಸ್ತಪ್ರತಿಗಳಿಗೆ ಅಂತಿಮ ರೂಪ ಕೊಟ್ಟರು. ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು